ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಡಿಸೆಂಬರ್ 21, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 219 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಮೂರು ರಾಜ್ಯಗಳಲ್ಲಿ ಜೆಎನ್.1 ಸೋಂಕಿನ 21 ಪ್ರಕರಣಗಳು ಪತ್ತೆ

ನವದೆಹಲಿ, ಡಿ. 20 – ಕೊರೊನಾದ ಜೆಎನ್.1 ಉಪತಳಿಯ 21 ಪ್ರಕರಣಗಳು ಮೂರು ರಾಜ್ಯಗಳಲ್ಲಿ ಪತ್ತೆಯಾಗಿವೆ ಎಂದು ನೀತಿ ಆಯೋಗ (ಆರೋಗ್ಯ)ದ ಸದಸ್ಯ ಡಾ. ವಿ.ಕೆ. ಪೌಲ್ ತಿಳಿಸಿದ್ದಾರೆ. ಈ ಉಪ ತಳಿಯ ಬಗ್ಗೆ ಕಳವಳ ಪಡಬೇಕಿಲ್ಲ. ಸೋಂಕಿತರಲ್ಲಿ (2ನೇ ಪುಟಕ್ಕೆ)

## ಇ.ಪಿ.ಎಫ್.ಒ. ಮಂಡಳಿಯಲ್ಲಿ ಒಬ್ಬರು ಒಬಿಸಿ ಇರಲು ಶಿಫಾರಸ್ಸು

ನವದೆಹಲಿ, ಡಿ. 20 – ಕೇಂದ್ರ ಇ.ಪಿ.ಎಫ್.ಒ. ಟ್ರಸ್ಟೀ ಮಂಡಳಿಯಲ್ಲಿ ಒ.ಬಿ.ಸಿ. ವರ್ಗದ ಕನಿಷ್ಠ ಒಬ್ಬರನ್ನು ಸೇರ್ಪಡೆ ಮಾಡಲು ಕಾರ್ಮಿಕ ಸಚಿವಾಲಯ ಪೂರ್ಣ ಪ್ರಯತ್ನ (2ನೇ ಪುಟಕ್ಕೆ)

# ಜಿಲ್ಲೆಯಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆಯಾಗದಿರುವಂತೆ ಕ್ರಮ : ಡಿಸಿ

ದಾವಣಗೆರೆ, ಡಿ. 20 - ಜಿಲ್ಲೆಯಲ್ಲಿ ಈ ವರ್ಷದ ಮಳೆಯ ಅಭಾವದಿಂದ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗುವ ಸಾಧ್ಯತೆಯಿದ್ದು, ರೈತರು ಮೇವಿನ ಸಂಗ್ರಹಣೆ ಕುರಿತಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದರು.



ಬುಧವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಮೇವು ಅಭಿವೃದ್ಧಿ ಕಾರ್ಯಪಡೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಈಗಾಗಲೇ ಬರ ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ರೈತರು ಬರುವ ಬೇಸಿಗೆ ಕಾಲದಲ್ಲಿ ಜಾನುವಾರುಗಳಿಗೆ ಅವಶ್ಯಕವಾಗಿ ಬೇಕಾಗುವ ಮೇವಿನ ಉತ್ಪಾದನೆಯನ್ನು ಹೆಚ್ಚಿಸಬೇಕು, ಮೇವು ಸೇರಿದಂತೆ ನೀರು, ಆಶ್ರಯ ಮತ್ತು ಆರೋಗ್ಯ ಪಾಲನೆ ಸೇವೆಗಳನ್ನು ಒದಗಿಸುವ ಮೂಲಕ ಜಾನುವಾರುಗಳನ್ನು ರಕ್ಷಿಸಿಕೊಳ್ಳಬೇಕು ಎಂದರು.

ರೈತರು ಮೇವನ್ನು ಒಣಗಿಸಿ ಹುಲ್ಲು ಹಾಳಾಗದಂತೆ ಶೇಖರಣೆ ಮಾಡಬೇಕು, ನೀರಾವರಿ ಸೌಲಭ್ಯವಿರುವ ರೈತರು ಜಾನುವಾರುಗಳಿಗೆ ನೀಡಬೇಕಾಗುವ ಮೇವಿನ ಅನುಸಾರ ಹಸಿರು ಮೇವು ಉತ್ಪಾದನೆ ಮಾಡಿ ರಸ ಮೇವಿನ ರೂಪದಲ್ಲಿ ಮೇವನ್ನು ಸಂಗ್ರಹಿಸಿಟ್ಟುಕೊಳ್ಳುವಂತೆ ತಿಳಿಸಬೇಕು. ಜಗಳೂರು ತಾಲ್ಲೂಕಿನಲ್ಲಿ ಹೆಚ್ಚು ಮೇವಿನ ಕೊರತೆ ಕಂಡುಬರುವ ಸಾಧ್ಯತೆಯಿದ್ದು, ಅಂತಹ ಸಂದರ್ಭದಲ್ಲಿ ಟೆಂಡರ್ ಮೂಲಕ ಮೇವನ್ನು ಪೂರೈಕೆ ಮಾಡಬೇಕು.

ಕೆ.ಎಂ.ಎಫ್ ಮತ್ತು ಪಶುಸಂಗೋಪನೆ ಇಲಾಖೆ ವತಿಯಿಂದ ಕ್ಯಾಂಪ್‌ಗಳ ಮೂಲಕ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕನಿಷ್ಠ ನೂರು ಜನ ರೈತರು ಮೇವಿನ ಬೆಳೆ ಬೆಳೆಯಬೇಕು ಈ ನಿಟ್ಟಿನಲ್ಲಿ ಅಧಿಕಾರಿಗಳು ರೈತರಿಗೆ ಪ್ರೋತ್ಸಾಹ ನೀಡಬೇಕು ಎಂದರು.

ಜಿಲ್ಲಾ ಪಂಚಾಯತ್ (3ನೇ ಪುಟಕ್ಕೆ)

# ಅಪರಾಧ ನ್ಯಾಯ ಮಸೂದೆಗಳಿಗೆ ಒಪ್ಪಿಗೆ

## ತ್ವರಿತ ನ್ಯಾಯ ಒದಗಿಸಲು ಕ್ರಮ ಎಂದ ಅಮಿತ್ ಷಾ

ನವದೆಹಲಿ, ಡಿ. 20 – ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ಬದಲಾವಣೆ ತರುವ ಉದ್ದೇಶದ ಮೂರು ಮಸೂದೆಗಳಿಗೆ ಲೋಕಸಭೆ ಅಂಗೀಕಾರ ನೀಡಿದೆ. ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಷಾ, ಈ ಮಸೂದೆಗಳಲ್ಲಿ ತ್ವರಿತ ನ್ಯಾಯ ಒದಗಿಸಲು ಒತ್ತು ನೀಡಲಾಗಿದೆ ಎಂದರು.



ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಮಸೂದೆಗಳಿಗೆ ಒಪ್ಪಿಗೆ ನೀಡಲಾಗಿದೆ. ಮಸೂದೆಗಳಿಗೆ ಅಂಗೀಕಾರ ನೀಡಿದಾಗ ಕಾಂಗ್ರೆಸ್, ಡಿ.ಎಂ.ಕೆ., ಟಿಎಂಸಿ ಹಾಗೂ ಇತರೆ ಪ್ರತಿಪಕ್ಷಗಳ ಸದಸ್ಯರು ಉಪಸ್ಥಿತರಿರಲಿಲ್ಲ. ಪ್ರತಿಪಕ್ಷಗಳ 97 ಸದಸ್ಯರನ್ನು ಅನುಚಿತ ವರ್ತನೆಯ ಹಿನ್ನೆಲೆಯಲ್ಲಿ ಅಮಾನತ್ತುಗೊಳಿಸಲಾಗಿದೆ.

ಎನ್.ಡಿ.ಎ.ಯೇತರ ಪಕ್ಷಗಳಾದ ಎಐಎಂಐಎಂನ ಅಸಾದುದ್ದೀನ್ ಒವೈಸಿ, ಬಿ.ಜೆ.ಡಿ. ಹಾಗೂ ಬಿ.ಎಸ್.ಪಿ.ಯ ಸಂಸದರು ಸದನದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಅಮಿತ್ ಷಾ, ನ್ಯಾಯದಾನ ವಿಳಂಬ ದೊಡ್ಡ ಸಮಸ್ಯೆಯಾಗಿತ್ತು. ನ್ಯಾಯದಾನದ ವಿಳಂಬದ ಬಗ್ಗೆ ಒಬ್ಬರು ಮತ್ತೊಬ್ಬರ ವಿರುದ್ಧ ದೂರುತ್ತಿದ್ದರು. ಬಡವರಿಗೆ ನ್ಯಾಯ ಪಡೆಯಲು ಹಣಕಾಸು ದೊಡ್ಡ ಸಮಸ್ಯೆಯಾಗಿತ್ತು. ನೂತನ ಕಾಯ್ದೆಗಳಲ್ಲಿ ಈ ವಿಷಯಗಳನ್ನು ಸ್ಪಷ್ಟಪಡಿಸಲಾಗಿದೆ. ನ್ಯಾಯದಾನ ವಿಳಂಬವಾಗುವುದಿಲ್ಲ ಎಂದರು.

ದೂರು ಬಂದ ಮೂರು ದಿನಗಳಲ್ಲಿ ಎಫ್.ಐ.ಆರ್. ದಾಖಲಿಸಬೇಕಿದೆ. 14 ದಿನಗಳಲ್ಲಿ ಪ್ರಾಥಮಿಕ ವರದಿ ಸಲ್ಲಿಸಬೇಕಿದೆ. ನ್ಯಾಯಾಧೀಶರು 45 ದಿನಗಳಿಗೂ ಹೆಚ್ಚು ಕಾಲ ತೀರ್ಪು ಕಾಯ್ದಿರಿಸಲು ಸಾಧ್ಯವಿಲ್ಲ. ದೋಷಮುಕ್ತರಾಗಲು ಆರೋಪಿಗಳು ಅರ್ಜಿ ಸಲ್ಲಿಸಲು ಏಳು ದಿನಗಳ ಕಾಲಾವಕಾಶ ನೀಡಲಾಗುವುದು. ನ್ಯಾಯಾಧೀಶರು ಏಳು ದಿನಗಳಲ್ಲಿ ಈ ಬಗ್ಗೆ ವಿಚಾರಣೆ ನಡೆಸಬೇಕು. 120 ದಿನಗಳಲ್ಲಿ ಪ್ರಕರಣವು ವಿಚಾರಣೆಗೆ ಬರಲಿದೆ ಎಂದು ಅಮಿತ್ ಷಾ ತಿಳಿಸಿದರು.

ಈ ಹಿಂದೆ ತಪ್ಪೊಪ್ಪಿಕೊಳ್ಳಲು ಯಾವುದೇ ಕಾಲ ಮಿತಿ ಇರಲಿಲ್ಲ. ಈಗಿನ ಕಾಯ್ದೆಯಲ್ಲಿ ಅಪರಾಧ ನಡೆದ30 ದಿನಗಳಲ್ಲಿ ತಪ್ಪು ಒಪ್ಪಿಕೊಂಡರೆ ಶಿಕ್ಷೆ ಕಡಿಮೆಯಾಗಲಿದೆ. ಆರೋಪಿಗಳ ಅನುಪಸ್ಥಿತಿಯಲ್ಲಿ ವಿಚಾರಣೆಗೂ ಅವಕಾಶ ಕಲ್ಪಿಸಲಾಗಿದೆ ಎಂದೂ ಅವರು ಹೇಳಿದರು.

ಈ ಮಸೂದೆಗಳ ಮೂಲಕ 'ರಾಜದ್ರೋಹ' ಎಂದಿದ್ದ ಪದವನ್ನು 'ದೇಶದ್ರೋಹ' ಎಂದು (2ನೇ ಪುಟಕ್ಕೆ)

# ಮಹಾಧಿವೇಶನ ಶಕ್ತಿ ಪ್ರದರ್ಶನವಲ್ಲ, ಜೊತೆಯಾಗಿ ಸಾಗುವ ವೇದಿಕೆ

## ವೀರಶೈವ ಮಹಾಸಭಾ ಪ್ರಧಾನ ಕಾರ್ಯದರ್ಶಿ ಈಶ್ವರ್ ಖಂಡ್ರೆ

ದಾವಣಗೆರೆ, ಡಿ.20 – ಮುಂಬರುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಧಿವೇಶನ ವೀರಶೈವ ಸಮಾಜ ಬಾಂಧವರ ಶಕ್ತಿ ಪ್ರದರ್ಶನದ ವೇದಿಕೆಯಲ್ಲ. ಇದು ಜೊತೆಯಾಗಿ ಸಾಗುವ ವೇದಿಕೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಈಶ್ವರ್ ಖಂಡ್ರೆ ಹೇಳಿದರು.



ಪತ್ರಕರ್ತರೊಂದಿಗೆ ಮಾತ ನಾಡಿದ ಅವರು, ಕೆಲ ಮಾಧ್ಯಮ ಗಳಲ್ಲಿ ಅಧಿವೇಶನ ಶಕ್ತಿ ಪ್ರದರ್ಶನ ಎಂದು ಬಿಂಬಿತವಾಗುತ್ತಿದೆ. ಆದರೆ ಇದು ವಾಡಿಕೆಯಂತೆ ನಡೆಯುತ್ತಿರುವ ಅಧಿವೇಶನ ಎಂದು ಸ್ಪಷ್ಟಪಡಿಸಿದರು.

ಸಮಾಜದ ಪ್ರಸ್ತುತ ಸವಾಲು ಗಳು - ಸಮಸ್ಯೆಗಳ ಕುರಿತು ಚರ್ಚಿಸುವುದು, ಸಮುದಾಯದ ಒಗ್ಗೂಡುವಿಕೆ ಹಾಗೂ ಯುವಕರಿಗೆ ಮಾರ್ಗದರ್ಶನ ಕೊಡುವುದು ಈ ಸಮಾವೇಶದ ಉದ್ದೇಶವಾಗಿದೆ. (2ನೇ ಪುಟಕ್ಕೆ)

# ಬರ ಪರಿಹಾರ ಬಿಡುಗಡೆಗೆ ಅಮಿತ್ ಷಾ ಬಳಿ ಮನವಿ

ಬೆಂಗಳೂರು, ಡಿ. 20 - ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರನ್ನು ಇಂದಿಲ್ಲಿ ಭೇಟಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕರ್ನಾಟಕಕ್ಕೆ ಬರ ಪರಿಹಾರ ಬಿಡುಗಡೆ ಮಾಡುವಲ್ಲಿ ಪ್ರಕೃತಿ ವಿಕೋಪ ಕುರಿತ ಉನ್ನತ ಮಟ್ಟದ ಸಮಿತಿ ಸಭೆಯನ್ನು ಕೂಡಲೇ ಕರೆದು, ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ರಾಜ್ಯದಲ್ಲಿ ತೀವ್ರ ಬರ ಪರಿಸ್ಥಿತಿ ತಲೆದೋರಿದ್ದು ರೈತರು, ಅದರಲ್ಲೂ ಸಣ್ಣ ಮತ್ತು ಅತಿ ಸಣ್ಣ ಕೃಷಿಕರು ತೀವ್ರ ಸಂಕಷ್ಟದಲ್ಲಿದ್ದಾರೆ. ಆಸ್ತಿ ವಿಭಜನೆ ಮತ್ತಿತರೆ ಕಾರಣಗಳಿಂದ ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆ 83 ಲಕ್ಷಕ್ಕೂ ಹೆಚ್ಚಿದೆ. 236 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳು ಬರ ಪೀಡಿತವಾಗಿವೆ ಎಂದು ಹೇಳಿದರು.

ಸುಮಾರು 48.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಸಂಭವಿಸಿ ದೆ. ಕೂಡಲೇ ಉನ್ನತ ಮಟ್ಟದ ಸಮಿತಿ ಸಭೆ ನಡೆಸಿ, 18,177.44 ಕೋಟಿ ರೂ. ಬರ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡಿದರು. ಪಿಎಂ-ಕಿಸಾನ್ ಯೋಜನೆಯಡಿ ಬೆಳೆ ಪರಿಹಾರ ವಿತರಣೆಗೆ ಫ್ರೂಟ್ಸ್‌ನಲ್ಲಿನ ದತ್ತಾಂಶ (2ನೇ ಪುಟಕ್ಕೆ)

## ಜೆಎನ್.1 ಈಗ ಡಬ್ಲ್ಯೂಹೆಚ್‌ಒದ ಆಸಕ್ತಿಯ ರೂಪಾಂತರಿ

ಜಿನೇವಾ, ಡಿ. 20 – ವಿಶ್ವ ಆರೋಗ್ಯ ಸಂಘಟನೆಯು (ಡಬ್ಲ್ಯೂ.ಹೆಚ್.ಒ.) ಕೊರೊನಾದ ಜೆಎನ್.1 ಪ್ರಭೇದವನ್ನು 'ಆಸಕ್ತಿಯ ರೂಪಾಂತರಿ' ಎಂದು ಪರಿಗಣಿಸಿದೆ. ಈ ರೂಪಾಂತರಿ ವೇಗವಾಗಿ ಹರಡುತ್ತಿದೆ. ಯಾದರೂ, ಜಾಗತಿಕ ಸಾರ್ವಜನಿಕ ಆರೋಗ್ಯದ ಮೇಲಿನ ಅಪಾಯ 'ಕಡಿಮೆ' ಎಂದು ವಿಶ್ವ ಆರೋಗ್ಯ ಸಂಘಟನೆ ಹೇಳಿದೆ.

ಇತ್ತೀಚಿನ ವಾರಗಳಲ್ಲಿ ಹಲವು ದೇಶಗಳಲ್ಲಿ ಜೆಎನ್.1 ಸೋಂಕು ಕಂಡು ಬರುತ್ತಿದೆ. ವೇಗದ ಹರಡುವಿಕೆಯ ಕಾರಣದಿಂದ ಇದನ್ನು ಆಸಕ್ತಿಯ ರೂಪಾಂತರಿ ಎಂದು ಗುರುತಿಸಲಾಗಿದೆ. (3ನೇ ಪುಟಕ್ಕೆ)

## ಸೀಟು ಹಂಚಿಕೆ : ಬಿಜೆಪಿ ವರಿಷ್ಠರೊಂದಿಗೆ ಹೆಚ್‌ಡಿಕೆ ಚರ್ಚೆ



ಬೆಂಗಳೂರು, ಡಿ. 20 - ಮುಂಬರುವ ಲೋಕಸಭೆ ಚುನಾವಣೆಗೆ ಸೀಟು ಹಂಚಿಕೆ ಹಾಗೂ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಬಿಜೆಪಿ ವರಿಷ್ಠರೊಂದಿಗೆ ಸಮಾಲೋಚನೆ ನಡೆಸಲು ಮಾಜಿ ಮುಖ್ಯಮಂತ್ರಿ ಮತ್ತು ಜೆಡಿಎಸ್ ರಾಜ್ಯಾ ಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ದೆಹಲಿಗೆ ತೆರಳಿದ್ದಾರೆ.

ಬಿಜೆಪಿ ವರುಷ್ಠರು ನೀಡಿದ ಆಹ್ವಾನದ ಹಿನ್ನೆಲೆಯಲ್ಲಿ ಕುಮಾರಸ್ವಾಮಿ ತಮ್ಮ ಸಿಂಗಪುರ ಪ್ರವಾಸವನ್ನು ಒಂದು ದಿನ ಮೊದಲೇ ಮೊಟಕುಗೊಳಿಸಿ ನಗರಕ್ಕೆ ಹಿಂತಿರುಗಿದ್ದರು.

ದೆಹಲಿಯಲ್ಲಿ ಮೂರು (3ನೇ ಪುಟಕ್ಕೆ)

## ಕೋವಿಡ್ : ಇಂದು ಸಿದ್ದರಾಮಯ್ಯ ಸಭೆ

ಬೆಂಗಳೂರು, ಡಿ. 20 - ಕೊರೊನಾ ಹರಡುವಿಕೆ ತಡೆಯುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ಮಧ್ಯಾಹ್ನ ಒಂದು ಗಂಟೆಗೆ ಗೃಹ ಕಚೇರಿ ಕೃಷ್ಣಾದಲ್ಲಿ ಉನ್ನತ ಮಟ್ಟದ ಸಭೆ ಕರೆದಿದ್ದಾರೆ.



ಇದರ ಮಧ್ಯೆ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ವಿಡಿಯೋ ಕಾನ್ಫರೆನ್ಸ್ ಮೂಲಕ ಕರ್ನಾಟಕದ ಆರೋಗ್ಯ ಸಚಿವರು ಹಾಗೂ ಅಧಿಕಾರಿಗಳೊಂದಿಗೆ, ರಾಜ್ಯದಲ್ಲಿನ ಕೊರೊನಾ ಸೋಂಕಿನ ಸ್ಥಿತಿಗತಿ ಹಾಗೂ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.

ಎರಡನೇ ಬಾರಿಗೆ ಕೋವಿಡ್ ಲಸಿಕೆ ತೆಗೆದುಕೊಂಡ ನಂತರವೂ ಕರ್ನಾಟಕದಲ್ಲಿ ಸೋಂಕು ಹರಡುತ್ತಿರುವ ಬಗ್ಗೆ ಮಾಹಿತಿ ನೀಡಿ ಹಾಗೂ ಸೋಂಕು ಪತ್ತೆಯ ಆರ್‌ಟಿ-ಪಿಸಿಆರ್ ಪರೀಕ್ಷೆ ಹೆಚ್ಚು ಮಾಡಿ, ಸೋಂಕಿಗೆ ಒಳಗಾದವರನ್ನು ಪ್ರತ್ಯೇಕಗೊಳಿಸಿ ಚಿಕಿತ್ಸೆ ನೀಡಿ ಎಂದು ರಾಜ್ಯ ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ. (2ನೇ ಪುಟಕ್ಕೆ)

# ಕನಕ ಬ್ಯಾಂಕ್ ಅಧ್ಯಕ್ಷರಾಗಿ ಕೆ. ಪರಶುರಾಮ್

## ಕೆ.ಪಿ. ಶ್ವೇತಾ ಉಪಾಧ್ಯಕ್ಷೆ

ದಾವಣಗೆರೆ, ಡಿ.20- ನಗರದ ಕನಕ ಪಟ್ಟಣ ಸಹಕಾರ ಬ್ಯಾಂಕ್ ಆಡಳಿತ ಮಂಡಳಿ ಅಧ್ಯಕ್ಷರಾಗಿ ಕೆ. ಪರಶುರಾಮ್ ಮತ್ತು ಉಪಾಧ್ಯಕ್ಷರಾಗಿ ಶ್ರೀಮತಿ ಕೆ.ಪಿ. ಶ್ವೇತಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.





ಬ್ಯಾಂಕಿನ ಆಡಳಿತ ಮಂಡಳಿಗೆ ಕಳೆದ ವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾದ ನೂತನ ನಿರ್ದೇಶಕ ಮಂಡಳಿಯು ಬ್ಯಾಂಕಿನ ಸಭಾಂಗಣದಲ್ಲಿ ನಿನ್ನೆ ಸೇರಿದ್ದ ಸಭೆಯಲ್ಲಿ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡಲಾಯಿತು. ನಿರ್ದೇಶಕರುಗಳಾದ ಕೆ.ಆರ್. (2ನೇ ಪುಟಕ್ಕೆ)

# ಹರಿಹರ ದರ್ಗಾ ಹತ್ತಿರದ ರಸ್ತೆ ಕಾಮಗಾರಿಗೆ ಚಾಲನೆ



ಹರಿಹರ, ಡಿ.20-ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಿನ್ನೆ ನಡೆದ ಸಭೆಯ ತೀರ್ಮಾನದಂತೆ ಹರಿಹರ ತುಂಗಭದ್ರಾ ನದಿ ಮುಂಭಾಗದ ದರ್ಗಾ ಹತ್ತಿರದ 50 ಅಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ತಾತ್ಕಾಲಿಕವಾಗಿ ಚಾಲನೆ ನೀಡಲಾಗಿದೆ ಎಂದು ಶಾಸಕ ಬಿ.ಪಿ. ಹರೀಶ್ ತಿಳಿಸಿದರು.

ಈ ರಸ್ತೆ ಕಾಮಗಾರಿಗೆ ಇಂದು ಗುದ್ದಲಿ ಪೂಜೆ ಸಲ್ಲಿಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಶಾಸಕ ಹರೀಶ್, ಬಿಜೆಪಿಯವರು, ಸಂಘ ಪರಿವಾರದವರು ಕಾಮಗಾರಿ ಮಾಡಲು ಬಿಡುತ್ತಿಲ್ಲ ಎಂಬ ಆರೋಪವನ್ನು 7 ವರ್ಷದಿಂದ ಕೇಳುತ್ತಾ ಬಂದಿದ್ದೆ. ಆದರೆ ಈ ರಸ್ತೆ ದುರಸ್ತಿ ಮಾಡಿಸುತ್ತೇನೆಂಬ ವಿಶ್ವಾಸ ನನ್ನದಾಗಿತ್ತು ಎಂದರು.

ದಾಖಲೆ ಇಲ್ಲದ ದರ್ಗಾದ ಬಳಿ 66.5 ಸಾವಿರ ಅಡಿ ಜಾಗ ಇದೆ. ಆದರೆ ನಗರಸಭೆಯ ದಾಖಲೆಯಲ್ಲಿ ಇರುವಂತದ್ದು ಕೇವಲ 11 ಸಾವಿರ ಅಡಿ ಮಾತ್ರ. 51 ಸಾವಿರ ಅಡಿ ಜಾಗಕ್ಕೆ ನಗರಸಭೆ ಮತ್ತು ತಹಶೀಲ್ದಾರರಿಗೆ ದರ್ಗಾ ಸಮಿತಿಯವರು ಯಾವುದೇ ರೀತಿಯ ದಾಖಲೆ ಕೊಟ್ಟಿಲ್ಲ. ದರ್ಗಾದವರು ಗೋಪುರ ಕಟ್ಟಿದ್ದು ಇತ್ತೀಚೆಗೆ. ದರ್ಗಾ ಉಳಿಸಲಿಕ್ಕೆ ಒತ್ತುವರಿ ಮಾಡಿಕೊಂಡಿದ್ದಾರೆಂದರು.

ಅಧಿವೇಶನದಲ್ಲಿ 7 ವರ್ಷಗಳಿಂದ ಇರುವ ಒಂದು ಸಮಸ್ಯೆಯನ್ನು ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ಅಧಿಕಾರಿ, ನಾನು 4 ದಿನಗಳಲ್ಲಿ ಪರಿಹರಿಸುವುದಾಗಿ ಅಧಿಕೃತ ಪೊಲೀಸ್ ರಕ್ಷಣೆ ಕೊಡಿ ಎಂದು ರಸ್ತೆ ಕಾಮಗಾರಿ ಮಾಡಲಿಕ್ಕೆ ಮುಂದಾದ ಸಮಯದಲ್ಲಿ, ನಮ್ಮ ಸಂಘಟಕರು ಶಾಸಕರು ಇಲ್ಲದ ಸಮಯದಲ್ಲಿ ದಬ್ಬಾಳಿಕೆ ಮಾಡಿ ಕಾಮಗಾರಿ ಮಾಡಬೇಡಿ ಎಂದು ತಡೆದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶಾಸಕ ಬಿ.ಪಿ. ಹರೀಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ವೆಂಕಟೇಶ್, ಎಸ್ಪಿ ಉಮಾ ಪ್ರಶಾಂತ್, ಡಿವೈಎಸ್ಪಿ ಜಿ.ಎಸ್. ಬಸವರಾಜ್, ಜಿಲ್ಲಾ ಲೋಕೋಪಯೋಗಿ ಇಲಾಖೆಯ ಅಧಿಕಾರಿ ನರೇಂದ್ರ ಬಾಬು ಸೇರಿದಂತೆ ಇತರೆ ಅಧಿಕಾರಿಗಳ ಸಮ್ಮುಖದಲ್ಲಿ ಸಭೆ ನಡೆಯಿತು ಎಂದರು.

ಸಾರ್ವಜನಿಕರು ಓಡಾಡುವುದಕ್ಕೆ ಅನುಕೂಲ ಆಗಬೇಕು ಎಂಬ ದೃಷ್ಟಿಯಿಂದ ಈಗ 50 ಅಡಿ ರಸ್ತೆಯನ್ನು ತಾತ್ಕಾಲಿಕವಾಗಿ ಕಾಮಗಾರಿ ಮಾಡಲು (3ನೇ ಪುಟಕ್ಕೆ)

## ಲಂಚ ಪ್ರಕರಣದಿಂದ ಮಾಡಾಳ್ ಮುಕ್ತ : ಹೈಕೋರ್ಟ್



ಬೆಂಗಳೂರು, ಡಿ. 20 - ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆ (ಕೆಎಸ್‌ಡಿಎಲ್) ಟೆಂಡರ್‌ಗಾಗಿ ಲಂಚ ಪಡೆದ ಪ್ರಕರಣದಿಂದ ಮಾಜಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಮುಕ್ತರಾಗಿದ್ದಾರೆ.

ತಮ್ಮ ವಿರುದ್ಧದ ಪ್ರಕರಣ ರದ್ದು ಕೋರಿ ಮಾಡಾಳ್ ವಿರೂಪಾಕ್ಷಪ್ಪ ಅವರು ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ಏಕ ಸದಸ್ಯ ಪೀಠ, ವಿಧಾನಸಭಾಧ್ಯಕ್ಷರ ಅನುಮತಿ ಪಡೆಯದೇ ಲೋಕಾಯುಕ್ತ ಪೊಲೀಸರಿಂದ ತನಿಖೆ (3ನೇ ಪುಟಕ್ಕೆ)

ನಾಲ್ಕನೇ ವರ್ಷದ ಪುಣ್ಯಸ್ಮರಣೆ



ದಿ|| ಶ್ರೀಮತಿ ಕೂಡ್ಲೆಮ್ಮ ಗುರುಸಿದ್ದಪ್ಪ ಸುಂಕದ್

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ
ಶ್ರೀ ಎಸ್.ಜಿ. ಮಂಜುನಾಥ,
ಶ್ರೀಮತಿ ಅನುರಾಧ, ಕು|| ಪಾವನಾ
ಮತ್ತು ಸುಂಕದ್ ವಂಶಸ್ಥರು.
ದಾವಣಗೆರೆ, ಫೋ. : 82775 96953

ಜನ್ಮದಿನದ ಶುಭಾಶಯಗಳು

ನನ್ನ ಕೂಸು ಇಳೆಗೆ ಬಂದ ಸುದಿನ ಇಂದು
ನನ್ನ ಮುದ್ದು ಅತ್ತ ಮೊದಲ ದಿನ ಇಂದು
ನಿನ್ನ ಹುಟ್ಟುಹಬ್ಬ ಇಂದು
ಖುಷಿ, ಸಂತೋಷದಿಂದ
ಇರು ನೀ ಎಂದೆಂದೂ...



Miss Teen Malnad 2023
Miss Teen Goodness Ambassador 2023
Miss Teen Talented 2023
Miss Dvg Super Talent 2022
ಪ್ರಶಸ್ತಿ ವಿಜೇತೆ
ನೇಹಾ ಭರತ್ ಚನ್ನಗಿರಿ
(ಶ್ರೀಮತಿ ಸಿ.ಬಿ. ರಶ್ಮಿ ಶ್ರೀ ಭರತ್ ಎಸ್. ಚನ್ನಗಿರಿ ಇವರ ಪುತ್ರಿ)
ಇವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು
ಭವಿಷ್ಯ ಉಜ್ವಲವಾಗಿರಲೆಂದು ಶುಭ ಹಾರೈಸುತ್ತೇವೆ.
- ಸಿ.ಆರ್. ಸತ್ಯನಾರಾಯಣ ಶ್ರೀಮತಿ ಸಿ.ಎಸ್. ದೇವಲೀಲಾ
- ಗೋವಿಂದರಾಜ್ ಗುಪ್ತ ಶ್ರೀಮತಿ ವಿಜಯಲಕ್ಷ್ಮಿ
- ಶ್ರೀಮತಿ ರಾಧಿಕಾ ಗೋಲಿ ಮತ್ತು ಪ್ರವೀಣ್ ಗೋಲಿ
- ಸಿ.ಬಿ. ನಿಹಾಲ್ ಸಾವನ್ ಗೋಲಿ

ಸಿಬ್ಬಂದಿ ವರ್ಗ:
ರಂಗಮಹಲ್ • ನ್ಯಾಷನಲ್ ಕಾನ್ಫರೆನ್ಸ್ ಹಾಲ್ • ನ್ಯಾಷನಲ್ ಲಾಡ್ಜ್

SET
(Self Evaluation Test)
Scan for SET
1st PUC - 2024
ADMISSION cum SCHOLARSHIP
Scan QR Code for SET
Scan For Brochure
CBSE, ICSE Offline
Test on 07-01-2024
STATE Offline
Test on 21-01-2024
Time : 10 am to 12 noon
NEET-2022 NEET MARKS 705/720 · STATE 1st · NEET-2020 NEET MARKS 703/720 · All India Rank 3rd · NEET-2023 NEET MARKS 680/720 · DIST. 1st · PU-2023 PU MARKS 592/600
10 IIT STUDENTS · 18 NIT STUDENTS · 8 IIIT STUDENTS · 9 AIIMS STUDENTS
300+ Free Medical seats in NEET - 2023
SIR M V GROUP OF INSTITUTIONS
- SIR MV PU COLLEGE, Near Govt. ITI College, Hadadi Road, Davangere-577 005. Ph: 08192-261200, 92433 12223, 87221 41400
- Sri Vidyabharathi Pre-University (IND) College, Kuvempu Nagara Extn., SUDA Layout, 'A' Block, Shivamogga-4 Ph: 90351 41142, 96065 58762, 96065 54836
- SATYAM PU COLLEGE, After 2nd Canal, Kappagal Village Road, Ballari - 583 103 Ph: 81977 64018, 99453 77965

# ಅರ್ಹ ಫಲಾನುಭವಿಗಳಿಗೆ ಸರ್ಕಾರದ ಸವಲತ್ತುಗಳನ್ನು ನೀಡಿ

## ಮಲೇಬೆನ್ನೂರು ಪುರಸಭೆ ಕಾರ್ಯಕ್ರಮದಲ್ಲಿ ಅಧಿಕಾರಿಗಳಿಗೆ ಶಾಸಕ ಬಿ.ಪಿ.ಹರೀಶ್ ಸಲಹೆ

ಮಲೇಬೆನ್ನೂರು ಡಿ. 20 - ಫಲಾನುಭವಿಗಳು ತಮಗೆ ನೀಡಿದ ಸರ್ಕಾರದ ಸೌಲಭ್ಯಗಳನ್ನು ತಾವೇ ಬಳಸಿಕೊಂಡು ಪ್ರಗತಿ ಸಾಧಿಸಬೇಕೆಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ಅವರು ಬುಧವಾರ ಪಟ್ಟಣದ ಪುರಸಭೆಯ ಎಸ್ಎಫ್‌ಸಿ ನಗರೋತ್ಥಾನ 15ನೇ ಹಣಕಾಸು ಯೋಜನೆ ಹಾಗೂ ಸ್ಥಳೀಯ ನಿಧಿಯ ಶೇ 24.10 ಮತ್ತು 7.25ರ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ವಿತರಿಸಿ ಮಾತನಾಡಿದರು.



ಪುರಸಭೆ ಸದಸ್ಯರು ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ನಾವು ನೀಡುವ ಸವಲತ್ತುಗಳು ಅವರ ಜೀವನಕ್ಕೆ ಸಹಕಾರಿಯಾಗುವಂತಿರಬೇಕು. ಆ ಮೂಲಕ ಸರ್ಕಾರದ ಯೋಜನೆಗಳು ಸದುಪಯೋಗ ವಾಗಬೇಕು ಎಂದು ಅವರು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವರನ್ನು ಕರೆಸಿ ಈ ಕಾರ್ಯಕ್ರಮವನ್ನು ದೊಡ್ಡ ಮಟ್ಟದಲ್ಲಿ ಮಾಡಬೇಕೆಂಬ ಉದ್ದೇಶದಿಂದ ಸ್ವಲ್ಪ ತಡವಾಗಿದೆ. ಆದರೂ ಸಚಿವರ ಸಮಯ ಸಿಗಲಿಲ್ಲ ಎಂದು ಅಧಿಕಾರಿಗಳು ಹೇಳಿದರು. ಸಚಿವರು ಬಂದಿದ್ದರೆ ಪಟ್ಟಣಕ್ಕೆ ಆಗಬೇಕಾದ ಕೆಲಸಗಳ ಬಗ್ಗೆ ಅವರ ಗಮನ ಸೆಳೆಯಬಹುದಿತ್ತೆಂದು ಶಾಸಕರು ಹೇಳಿದರು.

ಕಾರ್ಯಕ್ರಮದಲ್ಲಿ ಎಲ್ಲಾ ಫಲಾನುಭವಿಗಳನ್ನು ಕರೆಸಬೇಕಿತ್ತೆಂದು ಅಧಿಕಾರಿಗಳಿಗೆ ಹೇಳಿದ ಹರೀಶ್ ಅವರು, ಬಂದವರನ್ನು ಬಿಟ್ಟು, ಇನ್ನೊಬ್ಬರಿಗಾಗಿ ಕಾದು ಕುಳಿತರೆ ಬಂದವರನ್ನು ಕಳೆದುಕೊಳ್ಳಬೇಕಾಗುತ್ತದೆ. ಎಂದು ಶಾಮನೂರಿನಲ್ಲಿ ಮಂಗಳವಾರ ನಡೆದ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಆದ ಘಟನೆ ಪ್ರಸ್ತಾಪಿಸಿ, ಅಧಿಕಾರಿಗಳಿಗೆ ಹಾಗೂ ಪುರಸಭೆ ಸದಸ್ಯರಿಗೆ ಕಿವಿ ಮಾತು ಹೇಳಿದರು.

ಪುರಸಭೆ ಸದಸ್ಯ ಗೌಡ್ರ ಮಂಜಣ್ಣ, ಮಾಜಿ ಸದಸ್ಯ ಯುಸೂಫ್, ಭಾನುವಳ್ಳಿ ಸುರೇಶ್ ಮಾತ ನಾಡಿ, ಫಲಾನುಭವಿಗಳಿಗೆ ಸವಲತ್ತುಗಳ ವಿತರಣೆ ವಿಳಂಬ ಆಗಿದ್ದಕ್ಕೆ ಬೇಸರ ವ್ಯಕ್ತ ಪಡಿಸಿದರು.

ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, 200 ಫಲಾನುಭವಿಗಳಿಗೆ ಸೋಲಾರ್ ಲ್ಯಾಂಪ್, 115 ಫಲಾನುಭವಿಗಳಿಗೆ ಹೊಲಿಗೆ ಯಂತ್ರ ಮತ್ತು 98 ಫಲಾನುಭವಿಗಳಿಗೆ ವಾಟರ್ ಫೀಲ್ಟರ್‌ಗಳನ್ನು ಈ ದಿನ ವಿತರಿಸುತ್ತಿದ್ದೇವೆ. ಶಾಸಕರ ಪ್ರಯತ್ನದಿಂದಾಗಿ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ ಶೀಘ್ರದಲ್ಲಿ ಅನುಷ್ಠಾನಗೊಳ್ಳಲಿದ್ದು, ನೀರಿನ ತೆರಿಗೆ ಕೇವಲ 8% ರಷ್ಟು ಮಾತ್ರ ವಸೂಲಿ ಆಗುತ್ತಿದೆ. ಅನಧಿಕೃತ ನಲ್ಲಿಗಳನ್ನು ಹಾಕಿಕೊಂಡವರಿಗೆ ನೋಟಿಸ್ ನೀಡಿದ್ದು, ಅವರೆಲ್ಲರೂ ಕೂಡಲೇ ಕಂದಾಯ ಕಟ್ಟಿ ಅಧಿಕೃತ ಮಾಡಿಕೊಳ್ಳಬೇಕೆಂದರು.

ಉಪತಹಶೀಲ್ದಾರ್ ಆರ್.ರವಿ, ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಬಿ. ಮಂಜುನಾಥ್, ಟಿ. ಹನುಮಂತಪ್ಪ, ನಯಾಜ್, ಖಲೀಲ್, ಷಾ ಅಬ್ರಾರ್, ಭೋವಿ ಶಿವು, ಪಿ.ಆರ್. ರಾಜು, ಜಿಗಳೇರ ಹಾಲೇಶಪ್ಪ, ಓ.ಜಿ. ಕುಮಾರ್, ಭೋವಿಕುಮಾರ್, ರುಸ್ತುಂ, ಚಮನ್ ಷಾ, ಕೆ.ಪಿ. ಗಂಗಾಧರ್, ಮುಖಂಡರಾದ ಕೆ.ಜಿ. ವೀರನಗೌಡ್ರು, ಸುಬ್ಬಿ ರಾಜಣ್ಣ, ಎ.ಕೆ. ಲೋಕೇಶ್, ಭೋವಿ ಮಂಜಣ್ಣ, ನ್ಯಾಯಬೆಲೆ ಅಂಗಡಿ ಮಂಜಣ್ಣ, ಪಾಳೇಗಾರ್ ನಾಗರಾಜ್, ಬೆಣ್ಣೆಹಳ್ಳಿ ಬಸವರಾಜ್, ಎ.ಕೆ. ನಾಗರಾಜ್, ಭಾಷಾ, ಜಿಗಳಿ ಹನುಮಗೌಡ ಕುಮಾರನಹಳ್ಳಿ ಸುನೀಲ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಶ್ರೀಮತಿ ಮುಮ್ತಾಜ್ ಪ್ರಾರ್ಥಿಸಿದರು. ಪುರಸಭೆ ಅಧಿಕಾರಿ ದಿನಕರ್ ಸ್ವಾಗತಿಸಿದರು. ಕಿರಿಯ ಆರೋಗ್ಯ ಸಹಾಯಕ ಶಿವರಾಜ್ ನಿರೂಪಿಸಿದರೆ, ಪರಿಸರ ಇಂಜಿನಿಯರ್ ಉಮೇಶ್ ವಂದಿಸಿದರು.

# ನಗರದಲ್ಲಿ ಇಂದು ಶಾಲಾ-ಕಾಲೇಜು ಅಂಗಳದಲ್ಲಿ ಕಸಾಪ ಉಪನ್ಯಾಸ

ಶಾ ಲಾ - ಕಾ ಲೇ ಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮವು ಮಾಜಿ ಪುರಸಭಾ ಪ.ಪೂ. ಕಾಲೇಜು ಆವರಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಸುರೇಶ್ ಆರ್. ಅಧ್ಯಕ್ಷತೆ ವಹಿಸುವರು. 'ವಿದ್ಯಾರ್ಥಿ ಜೀವನದಲ್ಲಿ ಧನಾತ್ಮಕ ಚಿಂತನೆಗಳು' ವಿಷಯ ಕುರಿತು ಡಾ. ಜೆ.ಬಿ. ರಾಜ್ ಉಪನ್ಯಾಸ ನೀಡುವರು. ಶ್ರೀಮತಿ ಸೌಭಾಗ್ಯ ಹೆಚ್.ಎಂ., ದಾಗಿನಕಟ್ಟೆ ಪರಮೇಶ್ವರಪ್ಪ, ನವೀನ್‌ಕುಮಾರ್ ಉಪಸ್ಥಿತರಿರುವರು. ಸುಮತಿ ಜಯಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು. ಶ್ರೀಮತಿ ಸಿದ್ದಮ್ಮ ಬಿಸನಹಳ್ಳಿ ಪರ್ವತಪ್ಪ ದತ್ತಿ ದಾನಿಗಳಾದ ಶ್ರೀಮತಿ ಚೆಲುವಾಂಬ ಮತ್ತು ಪ್ರೊ. ಬಿ. ಸದಾಶಿವಪ್ಪ, ಸಂತೆಬೆನ್ನೂರು ಶ್ರೀಮತಿ ಲಕ್ಷ್ಮಮ್ಮ ಹಾಲಪ್ಪ ದತ್ತಿ ದಾನಿಗಳಾದ ಬಿ.ಹೆಚ್. ಸಿದ್ದಪ್ಪ, ತರಳಬಾಳು ಬಡಾವಣೆ ಹಾಗೂ ಕತ್ತಲಗೆರೆ ಶ್ರೀಮತಿ ಮಲ್ಲಮ್ಮ ಗೌಡರ ಜಯದೇವಪ್ಪ ದತ್ತಿ ದಾನಿಗಳಾದ ಶ್ರೀಮತಿ ಆರ್. ಸುಧಾ ಮತ್ತು ಡಾ. ಜೆ.ಬಿ. ರಾಜ್ ಇವರುಗಳಿಂದ ನಡೆಯುವುದು.ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ಹಿರಿಯ ನಾಗರಿಕರ ಸಹಾಯವಾಣಿ ಇವರುಗಳ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

# ಅಪರಾಧ ನ್ಯಾಯ ಮಸೂದೆಗಳಿಗೆ ಒಪ್ಪಿಗೆ

**(1ನೇ ಪುಟದಿಂದ)** ಬದಲಿಸಲಾಗಿದೆ. ಈ ಹಿಂದೆ ಸರ್ಕಾರ ಟೀಕಿಸುವುದನ್ನು ರಾಜ ದ್ರೋಹ ಎಂದು ಕರೆಯಲು ಅವಕಾಶವಿತ್ತು. ಬ್ರಿಟಿಷರ ಕಾಲದಲ್ಲಿ ರೂಪಿಸಲಾಗಿದ್ದ ಈ ಕಾಯ್ದೆಯನ್ನು ಕಿತ್ತು ಹಾಕಲಾಗಿದೆ ಎಂದರು.

ಸರ್ಕಾರ ಉಳಿಸಲು ಈ ಮಸೂದೆ ರೂಪಿಸಿಲ್ಲ, ದೇಶವನ್ನು ಉಳಿಸಲು ರೂಪಿಸಲಾಗಿದೆ. ಆರೋಗ್ಯಕರ ಪ್ರಜಾಪ್ರಭುತ್ವದಲ್ಲಿ ಸರ್ಕಾರ ಟೀಕಿಸಲು ಎಲ್ಲರಿಗೂ ಹಕ್ಕಿದೆ. ಆದರೆ, ಭಾರತವನ್ನು ಕೀಳಾಗಿ ಕಾಣಲು ಯಾರಿಗೂ ಅವಕಾಶವಿಲ್ಲ ಎಂದು ಅಮಿತ್ ಷಾ ಹೇಳಿದರು.

150 ವರ್ಷಗಳ ನಂತರ ಅಪರಾಧ ಸಂಬಂಧದ ಮೂರು ಕಾಯ್ದೆಗಳನ್ನು ಬದಲಿಸಿರುವ ಬಗ್ಗೆ ನಮಗೆ ಹೆಮ್ಮೆ ಇದೆ. ನಮಗೆ ಈ ಮಸೂದೆಗಳು ಅರ್ಥವಾಗಿಲ್ಲ ಎಂದು ಕೆಲವರು ಹೇಳುತ್ತಾರೆ. ಆದರೆ, ನೀವು ಭಾರತೀಯರಾಗಿ ನೋಡಿದರೆ ಈ ಮಸೂದೆಗಳು ಅರ್ಥವಾಗುತ್ತವೆ. ನಿಮ್ಮ ಮನಸ್ಸು ಇಟಲಿಯದ್ದಾಗಿದ್ದರೆ, ನೀವೆಂದೂ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಷಾ ಪರೋಕ್ಷವಾಗಿ ಕಾಂಗ್ರೆಸ್ ಟೀಕಿಸಿದರು.

ನಮ್ಮ ಸಂವಿಧಾನ, ವೈಯಕ್ತಿಕ ಸ್ವಾತಂತ್ರ್ಯ, ಮಾನವ ಹಕ್ಕುಗಳು ಹಾಗೂ ಎಲ್ಲರೂ ಸಮಾನರೆಂಬ ದೃಷ್ಟಿಕೋನಗಳೊಂದಿಗೆ ಈ ಮಸೂದೆಗಳನ್ನು ರೂಪಿಸಲಾಗಿದೆ ಎಂದೂ ಅವರು ತಿಳಿಸಿದರು.

ಈ ಮಸೂದೆಗಳ ಕುರಿತು ಸಮಗ್ರ ಸಮಾಲೋಚನೆ ನಡೆಸಲಾಗಿದೆ. ನಾನು ವೈಯಕ್ತಿಕವಾಗಿ 158 ಸಭೆಗಳಲ್ಲಿ ಪಾಲ್ಗೊಂಡಿದ್ದೇನೆ. ಈ ಮಸೂದೆಗಳ ಪ್ರತಿಯೊಂದು ಸಾಲಷ್ಟೇ ಅಲ್ಲದೇ, ಪ್ರತಿಯೊಂದು ಅಲ್ಪ ವಿರಾಮ ಹಾಗೂ ಪೂರ್ಣವಿರಾಮಗಳೂ ಗೊತ್ತಿದೆ ಎಂದು ಅಮಿತ್ ಷಾ ಹೇಳಿದರು.

ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಒವೈಸಿ, ನೂತನ ಅಪರಾಧ ಮಸೂದೆಗಳು ನಾಗರಿಕರ ಸ್ವಾತಂತ್ರ್ಯ ಹಾಗೂ ಹಕ್ಕುಗಳಿಗೆ ಬೆದರಿಕೆಯಾಗಿವೆ. ಪೊಲೀಸರಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ ಎಂದು ಆಕ್ಷೇಪಿಸಿದರು. ಶಿರೋಮಣಿ ಅಕಾಲಿ ದಳದ ನಾಯಕಿ ಹರ್‌ಸಿಮ್ರಾಟ್ ಕೌರ್ ಬಾದಲ್ ಮಾತನಾಡಿ, ಇಂತಹ ಪ್ರಮುಖ ಮಸೂದೆಗಳನ್ನು ಪಾರದರ್ಶಕ ಹಾಗೂ ನ್ಯಾಯೋಚಿತ ರೀತಿಯಲ್ಲಿ ಚರ್ಚಿಸಬೇಕಿತ್ತು. ಪ್ರತಿಯೊಬ್ಬರೂ ತಮ್ಮ ನಿಲುವು ತಿಳಿಸಲು ಅವಕಾಶ ನೀಡಬೇಕಿತ್ತು. ಆದರೆ, ಈಗ ಕೇವಲ ಆಡಳಿತಾರೂಢ ಸದಸ್ಯರು ಹಾಗೂ ಕೆಲವೇ ಪ್ರತಿಪಕ್ಷಗಳ ಸದಸ್ಯರಿದ್ದಾರೆ ಎಂದರು.

# ಕೋವಿಡ್ : ಇಂದು ಸಿದ್ದರಾಮಯ್ಯ ಸಭೆ

**(1ನೇ ಪುಟದಿಂದ)** ರಾಷ್ಟ್ರದ ಕೆಲವು ಭಾಗಗಳಲ್ಲಿ ಹೊಸ ವೈರಾಣು ಕಾಣಿಸಿಕೊಂಡಿದೆ, ಇದೊಂದು ಕೋವಿಡ್-19ರ ರೂಪಾಂತರ, ಭಯ-ಭೀತಿ ಬೇಡ, ಆದರೆ, ನಾವು ಎಚ್ಚರಿಕೆ ವಹಿಸಬೇಕಾಗಿದೆ ಎಂದಿದ್ದಾರೆ.

ಗೋವಾ ಮತ್ತು ಕೇರಳದಲ್ಲಿ ಪ್ರಕರಣಗಳು ಹೆಚ್ಚು ಕಂಡುಬಂದಿವೆ, ಆದ್ದರಿಂದ ಗಡಿಭಾಗದ ನೀವು, ಮುಂಜಾಗ್ರತಾ ಕ್ರಮ ಕೈಗೊಳ್ಳಿ ಎಂದು ತಿಳಿಸಿದ್ದಾರೆ.

ಬಹು ಅಂಗಾಂಗ ವೈಫಲ್ಯದಿಂದ ಬಳಲುತ್ತಿದ್ದ 64 ವರ್ಷದ ವೃದ್ಧರೊಬ್ಬರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆಯುತ್ತಿದ್ದಂತೆ ಸರ್ಕಾರ ಎಚ್ಚೆತ್ತು ಹಲವು ಕಠಿಣ ಕ್ರಮಕ್ಕೆ ಮುಂದಾಗಿದೆ.

ಕೇಂದ್ರ ಸಚಿವರೊಂದಿಗಿನ ವಿಡಿಯೋ ಸಂವಾದದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ದಿನೇಶ್ ಗುಂಡೂರಾವ್, ಚಾಮರಾಜನಗರ, ಮೈಸೂರು, ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚು ಕೋವಿಡ್ ಪರೀಕ್ಷೆ ನಡೆಸುವಂತೆ ಆದೇಶಿಸಲಾಗಿದೆ ಎಂದರು.

ಬರುವ ಶನಿವಾರದಿಂದ ಪ್ರತಿನಿತ್ಯ 5,000 ಪರೀಕ್ಷೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಕಳೆದ ಬಾರಿ ಸೋಂಕು ಕಂಡಾಗ ಶೇ.90ರಷ್ಟು ಮಂದಿ ಮನೆಯಲ್ಲೇ ಇದ್ದು ಚಿಕಿತ್ಸೆ ಪಡೆದುಕೊಂಡರು, ಈ ಬಾರಿ ನಾವು ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಳ್ಳುತ್ತಿದ್ದೇವೆ ಎಂದು ಹೇಳಿದರು.

ಸೋಂಕು ತಡೆಗೆ ಮುಂಜಾಗ್ರತಾ ಕ್ರಮ ಕೈಗೊಳ್ಳುವ ಸಂಬಂಧ ಮುಖ್ಯಮಂತ್ರಿ ಅವರು ನಾಳೆ ಉನ್ನತ ಮಟ್ಟದ ಸಭೆ ಕರೆದಿದ್ದು, ಅದರಲ್ಲಿ ಸಲಹಾ ಸಮಿತಿ ಸದಸ್ಯರು ಇರುತ್ತಾರೆ.

ಮುಂದಿನ ಮೂರು ತಿಂಗಳಿಗೆ ಅಗತ್ಯವಿರುವ ಔಷಧ ಮತ್ತು ಆಕ್ಸಿಜನ್ ಶೇಖರಣೆ ಮಾಡಲಾಗುವುದು, ನಗರದಲ್ಲಿ ಇದಕ್ಕಾಗಿ ಒಂದು ಆಸ್ಪತ್ರೆಯನ್ನು ಮೀಸಲಿಡಲಾಗುವುದು.

ರಾಜ್ಯದಲ್ಲಿ ನಿನ್ನೆ ಸೋಂಕಿಗೆ ಮೃತಪಟ್ಟಿರುವ ವ್ಯಕ್ತಿಗೆ ಟಿ.ಬಿ., ಅಸ್ತಮಾ, ಶ್ವಾಸಕೋಶದ ಸಮಸ್ಯೆಗಳಿತ್ತು, ಇವರಿಗೆ ಸೋಂಕು ತಗುಲಿ ಸಾವನ್ನಪ್ಪಿದ್ದಾರೆ ಎಂದರು.

# ರಾಷ್ಟ್ರೀಯ ವಿಜ್ಞಾನ ಸಮಾವೇಶಕ್ಕೆ ಈಶ್ವರಮ್ಮ ಶಾಲಾ ವಿದ್ಯಾರ್ಥಿನಿಯರು ಆಯ್ಕೆ




ದಾವಣಗೆರೆ, ಡಿ. 20 - ನಗರದಲ್ಲಿ ಈಚೆಗೆ ನಡೆದ 31ನೇ ಜಿಲ್ಲಾ ಮಟ್ಟದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ ನಗರದ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳು ರಾಜ್ಯ ಮಟ್ಟದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶಕ್ಕೆ ಆಯ್ಕೆಯಾಗಿದ್ದಾರೆ.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಭಾರತ ಮತ್ತು ಕರ್ನಾಟಕ ಸರ್ಕಾರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪ್ರಾದೇಶಿಕ ಉಪ ವಿಜ್ಞಾನ ಕೇಂದ್ರ (ದಾವಣಗೆರೆ) ವತಿಯಿಂದ ಆಯೋಜಿಸಿದ್ದ 31ನೇ ಜಿಲ್ಲಾ ಮಟ್ಟದ ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿನಿಯರಾದ ಬಿ.ಎನ್. ಭಾವನಾ (9 ನೇ ತರಗತಿ) ಮತ್ತು ಎಂ.ಪ್ರತೀಕ್ಷಾ (8 ನೇ ತರಗತಿ) ಇವರು 'ಸ್ವಾವಲಂಬನೆಗಾಗಿ ಪರಿಸರ ವ್ಯವಸ್ಥೆ ಆಧಾರಿತ ವಿಧಾನಗಳು' ಎಂಬ ಉಪ ವಿಷಯದ ಅಡಿಯಲ್ಲಿ 'ಕತ್ತಾಳೆ ಪಟ್ಟಿ, ಪರಿಸರದ ಗಟ್ಟಿ' ವಿಷಯವನ್ನು ಮಂಡನೆ ಮಾಡಿ ಗೆಲುವು ಸಾಧಿಸಿ, ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ವಿದ್ಯಾರ್ಥಿನಿಯರಿಗೆ ವಿಜ್ಞಾನ ಶಿಕ್ಷಕಿ ಸವಿತಾ ಎನ್. ಸ್ವಾಮಿ ಮಾರ್ಗದರ್ಶನ ನೀಡಿದ್ದರು.

ವಿದ್ಯಾರ್ಥಿನಿಯರನ್ನು ಈಶ್ವರಮ್ಮ ಆಡಳಿತ ಮಂಡಳಿಯ ಅಧ್ಯಕ್ಷರಾದ ಕೆ.ಆರ್. ಸುಜಾತ ಕೃಷ್ಣ, ಕಾರ್ಯದರ್ಶಿ ಎ.ಆರ್. ಉಷಾರಂಗ ನಾಥ, ಖಜಾಂಚಿ ಸುಜಾತ ಎ.ಪಿ. ಮತ್ತು ಈಶ್ವರಮ್ಮ ಟ್ರಸ್ಟ್ ಕಾರ್ಯದರ್ಶಿ ಜಿ.ಆರ್. ವಿಜಯಾನಂದ್, ಶಾಲಾ ಪ್ರಾಂಶುಪಾಲ ಕೆ. ಎಸ್. ಪ್ರಭುಕುಮಾರ್, ಉಪಪ್ರಾಂಶು ಪಾಲರಾದ ಶಶಿರೇಖಾ ಜಿ.ಎಸ್. ಅಭಿನಂದಿಸಿದ್ದಾರೆ.

# ಸೋಂಕಿನ ಪ್ರಕರಣ ಪತ್ತೆ

**(1ನೇ ಪುಟದಿಂದ)** ಬಹುತೇಕರು ಮನೆಯಲ್ಲೇ ಚಿಕಿತ್ಸೆ ಪಡೆಯಲು ಬಯಸಿದ್ದಾರೆ ಎಂದವರು ತಿಳಿಸಿದ್ದಾರೆ. ಗೋವಾದಲ್ಲಿ 19, ಕೇರಳ ಹಾಗೂ ಮಹಾರಾಷ್ಟ್ರಗಳಲ್ಲಿ ತಲಾ ಒಂದು ಸೋಂಕು ಪ್ರಕರಣ ಪತ್ತೆಯಾಗಿದೆ.

# ಕನಕ ಬ್ಯಾಂಕ್ ಅಧ್ಯಕ್ಷರಾಗಿ ಪರಶುರಾಮ್

**(1ನೇ ಪುಟದಿಂದ)** ಭರಮಪ್ಪ, ಬಿ. ದಿಳ್ಳೆಪ್ಪ, ಹೆಚ್.ಎಂ. ಗೋಣೆಪ್ಪ, ಪಿ.ಲಕ್ಕಪ್ಪ, ಎಸ್.ಹೆಚ್. ಕಾಂತೇಶ್ ಶ್ರೀಮತಿ ಗೀತಾ ಬಿ. ಮಾಲತೇಶಪ್ಪ, ಹೆಚ್.ಸಿ. ಗಣೇಶ್, ವೀರಭದ್ರಪ್ಪ (ಜರೇಶ್), ಟಿ.ಎನ್. ಪ್ರಕಾಶ್ ಮ್ತು ಜಿ.ಎಸ್. ಹನುಮಂತ ಅವರುಗಳು ಸಭೆಯ ಕಾರ್ಯಕಲಾಪದಲ್ಲಿ ಪಾಲ್ಗೊಂಡಿದ್ದರು.

ಸಹಕಾರ ಸಂಘಗಳ ಇಲಾಖೆಯ ಸಹಾಯಕ ನಿಬಂಧಕರಾದ ಮಂಜುಳಾ ಅವರು ಚುನಾವಣೆಯನ್ನು ನಡೆಸಿಕೊಟ್ಟರು. ಬ್ಯಾಂಕಿನ ವ್ಯವಸ್ಥಾಪಕ ಬಿ.ಎಲ್. ಗೌಡ, ಲೆಕ್ಕಾಧಿಕಾರಿ ರಮೇಶ್ ದೇವಜ್ಜಿ ಅವರುಗಳು ಸಹಾಯಕರಾಗಿ ಕಾರ್ಯ ನಿರ್ವಹಿಸಿದರು.

# ರಾಜ್ಯ ರೈತ ಸಂಘದ ತಾ.ಅಧ್ಯಕ್ಷರಾಗಿ ಚಿಕ್ಕಮಲ್ಲನಹೊಳೆ ಚಿರಂಜೀವಿ ಆಯ್ಕೆ



**ಜಗಳೂರು**

ಜಗಳೂರು, ಡಿ.20- ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ ಬಣ) ತಾಲ್ಲೂಕು ಅಧ್ಯಕ್ಷರಾಗಿ ಚಿಕ್ಕಮಲ್ಲನಹೊಳೆ ಚಿರಂಜೀವಿ, ಪ್ರಧಾನ ಕಾರ್ಯದರ್ಶಿಯಾಗಿ ರಾಜು, ತಾಲ್ಲೂಕು ಹಸಿರು ಸೇನೆ ಅಧ್ಯಕ್ಷರಾಗಿ ನಾಗರಾಜು ಅವರನ್ನು ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ನೇತೃತ್ವದಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ ಜಿಲ್ಲಾ ಮುಖಂಡ ಕಾನನಕಟ್ಟೆ ತಿಪ್ಪೇಸ್ವಾಮಿ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಯ್ಕೆಯಾಗಿರುವ ನೂತನ ಪದಾಧಿಕಾರಿಗಳು ರೈತರ ಸಮಸ್ಯೆಗಳಿಗೆ ಬೆನ್ನೆಲುಬಾಗಿ ನಿಂತು ಕೆಲಸ ಮಾಡಬೇಕೆಂದು ಅವರು ಕಿವಿಮಾತು ಹೇಳಿದರು.

ನೂತನ ಅಧ್ಯಕ್ಷ ಚಿಕ್ಕಮಲ್ಲನಹೊಳೆ ಚಿರಂಜೀವಿ ಮಾತನಾಡಿ, ಬೆಸ್ಕಾಂ ಇಲಾಖೆಗೆ ರೈತರು ತಮ್ಮ ಹೊಲಗಳಿಗೆ ಹಲವಾರು ವರ್ಷಗಳ ಹಿಂದೆ ಕೊರೆಸಿರುವ ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅಕ್ರಮ-ಸಕ್ರಮ ಹಣ ಕಟ್ಟಿದ್ದರು. ಈಗ ಸರ್ಕಾರ ಅಕ್ರಮ-ಸಕ್ರಮ ಯೋಜನೆ ಸ್ಥಗಿತಗೊಳಿಸಿ ಸೋಲಾರ್ ಹಾಕುವಂತೆ ಆದೇಶ ಮಾಡಿ, ರೈತರಿಗೆ ಹಣಕಾಸಿನ ಹೊರೆ ಮಾಡಿದೆ. ಅಕ್ರಮ-ಸಕ್ರಮಕ್ಕೆ ಕಟ್ಟಿರುವ ರೈತರಿಗೆ ವಿದ್ಯುತ್ ಸಂಪರ್ಕ ಕೊಡಬೇಕು. ರೈತರಿಗೆ ಸೋಲಾರ್ ಹಾಕುವಂತೆ ನೀಡಿರುವ ಕಾನೂನನ್ನು ವಾಪಸ್ ಪಡೆಯಬೇಕು. ಈ ಸಂಬಂಧ ಡಿ.28 ರಂದು ಪಟ್ಟಣದ ಅಂಬೇಡ್ಕರ್ ವೃತ್ತದಿಂದ ಬೃಹತ್ ಮೆರವಣಿಗೆಯ ಮೂಲಕ ಬೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ ಬಣ)ಯ ಪದಾಧಿಕಾರಿಗಳಾದ ಶರಣಪ್ಪ, ಗೋವಿಂದ, ಕ್ಯಾಸೇನಹಳ್ಳಿ ಬಸಪ್ಪ, ಬಸವರಾಜ್ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಉತ್ತಮ ಮಹಿಳಾ ಉದ್ಯಮಿ ಪ್ರಶಸ್ತಿ ಪ್ರದಾನ

ದಾವಣಗೆರೆ, ಡಿ. 20- ವನಿತಾ ಸಮಾಜದ ಅಂಗ ಸಂಸ್ಥೆಯಾದ 'ಪ್ರೇರಣಾ' ಜಿಲ್ಲಾ ಮಹಿಳಾ ಉದ್ಯಮಿಗಳ ಸಂಸ್ಥೆ ವತಿಯಿಂದ ನಾಳೆ ದಿನಾಂಕ 21 ರ ಗುರುವಾರ ಸಂಜೆ 4.30 ಕ್ಕೆ ನಗರದ ವನಿತಾ ಸಮಾಜದ ಆವರಣದಲ್ಲಿ ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರ ಜನ್ಮ ದಿನಾಚರಣೆ, ಮಹಿಳೆಯರು ಉತ್ಪಾದಿಸಿದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ, ಉತ್ತಮ ಮಹಿಳಾ ಉದ್ಯಮಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಪ್ರೇರಣಾ ಸಂಸ್ಥೆಯ ಅಧ್ಯಕ್ಷೆ ಉಮಾ ನಾಗರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ದಿನಾಂಕ 21 ರ ಗುರುವಾರ ಬೆಳಿಗ್ಗೆ 10 ರಿಂದ ರಾತ್ರಿ 8 ರವರೆಗೆ ಮಹಿಳೆಯರು ಉತ್ಪಾದಿಸಿದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಲಿದೆ.

ಸುಮಾರು 25 ಮಳಿಗೆಗಳಲ್ಲಿ ಮಹಿಳೆಯರು ತಯಾರಿಸಿದ ವಸ್ತುಗಳ ಪ್ರದರ್ಶನ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಮುಖ್ಯ ಅತಿಥಿಗಳಾಗಿ ಎಸ್.ಎಸ್. ಕೇರ್ ಟ್ರಸ್ಟ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್, ಸಿ. ನಾಸೀರ್ ಅಹಮದ್, ಹಿರಿಯ ವೈದ್ಯ ಡಾ. ಬಿ. ಎಸ್. ನಾಗಪ್ರಕಾಶ್, ನಳಿನಿ ಅಚ್ಯುತ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ನಾಗಮ್ಮ ಕೇಶವಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಬಾರಿ ಸಿರಿಧಾನ್ಯ ಬೆಳೆದು ಯಶಸ್ವೀ ಉದ್ಯಮಿಗಳಾಗಿರುವ ಹರಿಹರದ ತಾಲ್ಲೂಕು ನಿಟ್ಟೂರಿನ ಸರೋಜ ಪಾಟೀಲ್ ಅವರಿಗೆ ಉತ್ತಮ ಮಹಿಳಾ ಉದ್ಯಮಿ ಪ್ರಶಸ್ತಿ ನೀಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ನಾಗರತ್ನ ಜಗದೀಶ್, ಆಶಾ ಪಾಟೀಲ್, ನಂದಿನಿ, ಸುಚಿತ್ರ ಉಪಸ್ಥಿತರಿದ್ದರು.

# ಪರಿಹಾರ ಬಿಡುಗಡೆಗೆ ಮನವಿ

**(1ನೇ ಪುಟದಿಂದ)** ಪರಿಗಣಿಸುವಂತೆ ಮುಖ್ಯಮಂತ್ರಿ ಮನವಿ ಮಾಡಿದ್ದಾರೆ.

ತುರ್ತು ಪರಿಹಾರದ ಮೊತ್ತ 12,577.86 ಕೋಟಿ ರೂ. ಆಗಿದ್ದು, ನವೆಂಬರ್ 4 ರಂದು ಹೆಚ್ಚುವರಿಯಾಗಿ 7 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪೂರಕ ಮನವಿಯೊಂದಿಗೆ ಕೇಂದ್ರದಿಂದ 18,177.44 ಕೋಟಿ ರೂ. ಪರಿಹಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದಿದ್ದಾರೆ.

ಈ ಸಂದರ್ಭದಲ್ಲಿ ಕಂದಾಯ ಸಚಿವ ಕೃಷ್ಣ ಭೈರೇಗೌಡ ಉಪಸ್ಥಿತರಿದ್ದರು.

# ಟೆನ್ನಿಸ್ ಟೂರ್ನಿ : ಶುಕ್ಲಾ ಮೋನಿಕಾ ಪ್ರಥಮ



ದಾವಣಗೆರೆ, ಡಿ. 20- ನಗರದಲ್ಲಿ ಈಚೆಗೆ ನಡೆದ ಆಹ್ವಾನಿತ ಟೆನ್ನಿಸ್ ಟೂರ್ನಿಯಲ್ಲಿ 10 ವರ್ಷದೊಳಗಿನ ಬಾಲಕರ ಟೆನ್ನಿಸ್ ಪಂದ್ಯಾವಳಿಯಲ್ಲಿ ಸೊಲ್ಲಾಪುರದ ಚಿ. ಶುಕ್ಲಾ ಮೋನಿಕಾ ಪ್ರಥಮ ಸ್ಥಾನ ಪಡೆದಿರುತ್ತಾರೆ.

ಶುಕ್ಲಾ ಮೋನಿಕಾ, ಸೊಲ್ಲಾಪುರದ ಮೋನಿಕಾ ಸ್ವಪ್ನ ಇಳಂದ ದಂಪತಿ ಪುತ್ರ ಹಾಗೂ ಸಾಮಾಜಿಕ ಸೇವಾ ಕಾರ್ಯಕರ್ತ ಅಜ್ಜಂಪುರ ಎಸ್. ಮೃತ್ಯುಂಜಯ ಅವರ ಮೊಮ್ಮಗ. ಟೆನ್ನಿಸ್ ಟೂರ್ನಿಯ ಖಜಾಂಚಿ ಅನಿತ್‌ಕುಮಾರ್, ಕಾರ್ಯದರ್ಶಿ ನವೀನ್ ವಾಲ್ವಕರ್, ಮಹಾಂತೇಶ್ ಬಹುಮಾನ ವಿತರಿಸಿದರು. ಈ ಸಂದರ್ಭದಲ್ಲಿ ಅಜ್ಜಂಪುರ ಎಸ್. ಮೃತ್ಯುಂಜಯ ಮತ್ತು ಇತರರು ಉಪಸ್ಥಿತರಿದ್ದರು.

# ಮಹಾಧಿವೇಶನ ಶಕ್ತಿ ಪ್ರದರ್ಶನವಲ್ಲ

**(1ನೇ ಪುಟದಿಂದ)** ಸಾಮಾಜಿಕ ನ್ಯಾಯ ಪ್ರತಿಪಾದಿಸಿರುವುದು ಲಿಂಗಾಯತ ಸಮುದಾಯ. ದುರ್ಬಲ ಹಾಗೂ ಶೋಷಿತ ಸಮುದಾಯವನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುವ ಜವಾಬ್ದಾರಿ ವೀರಶೈವ ಲಿಂಗಾಯತ ಸಮುದಾಯಕ್ಕೆ ಇದೆ. ಈ ನಿಟ್ಟಿನಲ್ಲಿ ಅಧಿವೇಶನದಲ್ಲಿ ಅನೇಕ ಗೋಷ್ಠಿಗಳು ನಡೆಯಲಿವೆ ಎಂದವರು ಹೇಳಿದರು.

ಡಿ.23ರಿಂದ ಆರಂಭವಾಗುವ ಸಮಾವೇಶದಲ್ಲಿ ರೈತರ ಅಧಿವೇಶನ, ಮಹಿಳೆಯರು, ಯುವಕರು, ನೌಕರರ ಮತ್ತು ಧರ್ಮಸಭಾ ಅಧಿವೇಶನಗಳು ನಡೆಯಲಿವೆ. ಎರಡನೇ ದಿನವಾದ ಡಿ.24 ರಂದು ನಿರ್ಣಯಗಳ ಮಂಡನೆಯಾಗಲಿವೆ. ನಾಡಿನ ಪ್ರತಿಷ್ಠಿತ ಮಠಾಧೀಶರು, ಹಾಲಿ-ಮಾಜಿ ಮುಖ್ಯಮಂತ್ರಿಗಳು, ಸಾಹಿತಿಗಳು, ಚಿಂತಕರು, ಸಚಿವರು ಭಾಗವಹಿಸಲಿದ್ದಾರೆ. ಲಕ್ಷಾಂತರ ಜನರು ಸೇರುವ ನಿರೀಕ್ಷೆ ಇದೆ ಎಂದರು.

ಎರಡು ದಿನಗಳ ಅಧಿವೇಶನದಲ್ಲಿ ಸಮಾಜದ ಹಿತದ ಬಗೆ ಚರ್ಚೆ ನಡೆಯಲಿದೆ. ರೈತರಿಗೆ ಆಧುನಿಕ ಕೃಷಿ ಪದ್ಧತಿ, ಯುವಕರಿಗೆ ಉದ್ಯೋಗ, ಸರ್ಕಾರದ ಸೌಲಭ್ಯಗಳ ಕುರಿತು ಚರ್ಚೆ ನಡೆಯಲಿದೆ ಎಂದು ಖಂಡ್ರೆ ಹೇಳಿದರು.

ಮಹಾಸಭಾ ಜಾತಿಗಣತಿ ವಿರೋಧಿಯಲ್ಲ. ಆದರೆ ಜಾತಿಗಣತಿ, ಸಾಮಾಜಿಕ, ಆರ್ಥಿಕ ಸಮೀಕ್ಷೆ, ವಾಸ್ತವಾಂಶದ ಆಧಾರದ ಮೇಲೆ ಇರಬೇಕೆಂಬ ಬೇಡಿಕೆ ಇದೆ. ಈಗಾಗಲೇ ಈ ಸಂಬಂಧ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ ಎಂದೂ ಅವರು ಹೇಳಿದರು.

# ಒಬ್ಬರು ಒಬಿಸಿ ಇರಲು ಶಿಫಾರಸ್ಸು

**(1ನೇ ಪುಟದಿಂದ)** ನಡೆಸಬೇಕು ಎಂದು ಸಂಸತ್ತಿನ ಸ್ಥಾಯಿ ಸಮಿತಿಯೊಂದು ಶಿಫಾರಸ್ಸು ಮಾಡಿದೆ. ಹಿಂದುಳಿದ ವರ್ಗಗಳನ್ನು ಮುಖ್ಯವಾಹಿನಿಗೆ ತರಲು ಎಲ್ಲ ಹಂತಗಳಲ್ಲಿ ಪ್ರಾತಿನಿಧ್ಯ ಕಲ್ಪಿಸಬೇಕಿದೆ ಎಂದು ಇತರೆ ಹಿಂದುಳಿದ ವರ್ಗಗಳ ಕಲ್ಯಾಣ ಕುರಿತ ಸದನ ಸಮಿತಿ ಶಿಫಾರಸ್ಸು ಮಾಡಿದೆ.

# ಕಲಾಕುಂಚ : ನಗರದಲ್ಲಿ ಇಂದು ಪದಗ್ರಹಣ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಿದ್ದವೀರಪ್ಪ ಬಡಾವಣೆ ಶಾಖೆಯ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಸಿದ್ದವೀರಪ್ಪ ಬಡಾವಣೆಯ 7ನೇ ಮೇನ್, 14ನೇ ಕ್ರಾಸ್ ನಲ್ಲಿರುವ ಸಂದೇಶ ಸಭಾಂಗಣದಲ್ಲಿ ಇಂದು ಸಂಜೆ 5 ಗಂಟೆಗೆ ನಡೆಯಲಿದೆ.

ಕಾರ್ಯಕ್ರಮವನ್ನು ದೃಶ್ಯ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರು ಉದ್ಘಾಟಿಸುವರು. ಸಾಲಿಗ್ರಾಮ ಗಣೇಶ್ ಶೆಣೈ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕೆ.ಹೆಚ್. ಮಂಜುನಾಥ್, ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ ಆಗಮಿಸುವರು.

ಶ್ರೀಮತಿ ಜ್ಯೋತಿ ಗಣೇಶ್ ಶೆಣೈ ಮತ್ತು ಶ್ರೀಮತಿ ಲಲಿತಾ ಕಲ್ಲೇಶ್ ಗೌರವ ಉಪಸ್ಥಿತರಿರುವರು.

# ಶಿಕ್ಷಣ, ಸಂಸ್ಕಾರದಿಂದ ಮಾತ್ರ ತಳಸಮುದಾಯದ ಏಳಿಗೆ ಸಾಧ್ಯ

## ಹರಪನಹಳ್ಳಿ ಕಾರ್ಯಕ್ರಮದಲ್ಲಿ ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಶ್ರೀ ಬಸವ ಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ

ಹರಪನಹಳ್ಳಿ, ಡಿ. 20 - ತಳಸಮುದಾಯಗಳ ಏಳಿಗೆಯಾಗಬೇಕಾದರೆ ಶಿಕ್ಷಣ ಮತ್ತು ಉತ್ತಮ ಸಂಸ್ಕಾರದಿಂದ ಮಾತ್ರ ಸಾಧ್ಯ ಎಂದು ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಶ್ರೀ ಬಸವ ಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ಹೊಸಪೇಟೆ ರಸ್ತೆ ಬಳಿ ಇರುವ ಸಮತಾ ರೆಸಾರ್ಟ್‌ನಲ್ಲಿ ಸಾಮೂಹಿಕ ಸಂಘಟನೆಗಳ ಹೋರಾಟ ಸಮಿತಿ ವತಿಯಿಂದ ಜನಪರ ಚಳುವಳಿ ನೇತಾರ ದಿ. ಪುಣಬಗಟ್ಟ ಎಸ್. ನಿಂಗಪ್ಪ ಅವರಿಗೆ ನುಡಿ ನಮನ ಕಾರ್ಯಕ್ರಮ ದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.




ನಂಬಿದ ಸಿದ್ಧಾಂತಕ್ಕೆ ಅವರು ಗುಲಾಮರಾದವರಲ್ಲ. ಸ್ವವಿಮರ್ಶೆಯಿಲ್ಲದೆ ಯಾವುದನ್ನೂ ಅವರು ಸಮರ್ಥಿಸಲು ಹೋದವರಲ್ಲ. ನಿರಂತರ ಬದಲಾವಣೆಗಳಿಗೆ ಸೂಕ್ಷ್ಮವಾಗಿ ಸ್ಪಂದಿಸುತ್ತಲೇ ತನ್ನ ಲೋಕ ಗ್ರಹಿಕೆಯಲ್ಲಿ ತಿದ್ದುಪಡಿ ಮಾಡಿಕೊಳ್ಳುತ್ತಲಿದ್ದರೂ ಜೀವದಯೆಯನ್ನು ಬಿಟ್ಟವರಲ್ಲ. ತಿರುಚಬಹುದಾದ ಸಾಕ್ಷಿ ಮತ್ತು ಹಠಮಾರಿ ತರ್ಕಗಳನ್ನು ಮೀರಿದ ಮಾನವೀಯತೆ ನಿಂಗಪ್ಪ ಅವರ ಜೀವನ ದರ್ಶನವಾಗಿತ್ತು. ಪ್ರಬುದ್ಧತೆಯ ನಡುವೆ ಮುಗ್ಧತೆಯನ್ನು ಕಾಪಿಟ್ಟುಕೊಂಡಿದ್ದ ಅವರ ಪಾರದರ್ಶಕ ಒಳಗಣ್ಣಿಗೆ ಯಾರಿಗೂ ಕಾಣದ ಸತ್ಯ ಗೋಚರಿಸುತ್ತಿತ್ತು.

ನಿವೃತ್ತ ಪ್ರಾಂಶುಪಾಲ ಟಿ. ರಾಜಪ್ಪ ಮಾತನಾಡಿ, ಹೋರಾಟದ ಹಾದಿಯಲ್ಲಿ ಹೇಗಿರಬೇಕು? ಸಮಾಜದ ಕುರಿತು ಹೇಗೆ ಯೋಚಿಸಬೇಕು? ಮತ್ತು ಜನರ ನಡುವೆ ನಾವು ಹೇಗೆ ಇರಬೇಕು ಎಂಬುದಕ್ಕೆ ನಿಂಗಪ್ಪನವರೇ ಸಾಕ್ಷಿ ಎಂದರು.

ಪ್ರಗತಿ ಪರ ಚಿಂತಕ ಕೋಡಿಹಳ್ಳಿ ಭೀಮಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ರವರ ವಿಚಾರಗಳನ್ನು ಮೈಗೂಡಿಸಿಕೊಂಡಿದ್ದರೂ ಜಾತಿಗಿಂತ ನೀತಿ ಮುಖ್ಯ ಎನ್ನುವ ಆಲೋಚನೆಗಳು ನಿಂಗಪ್ಪನವರಲ್ಲಿ ಇದ್ದವು ಎಂದರು.

ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ವೈ.ಡಿ. ಅಣ್ಣಪ್ಪ, ಮುಖಂಡ ಕೆ.ಬಿ.ಕೊಟ್ರೇಶ್ ಹೋರಾಟಗಾರ ಆವರಗೆರೆಯ ರುದ್ರಮುನಿ, ಗುಡಿಹಳ್ಳಿ ಹಾಲೇಶ್ ಮಾತನಾಡಿದರು.

ವೇದಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಮಾಜಿ ಅಧ್ಯಕ್ಷ ಡಿ. ರಾಮನಮಲಿ, ಸಾಹಿತಿ ಇಸ್ಮಾಯಿಲ್ ಎಲಿಗಾರ್ ಎನ್.ಜಿ.ಮನೋಹರ ಚಿಂತಕ ಮೋತಿನಾಯ್ಕ ಅರಸಿಕೇರೆ ಉಪನ್ಯಾಸಕ ದುರುಗೇಶ್ ಮುಖಂಡರಾದ ಕಂಭತ್ತಹಳ್ಳಿ ಎ.ಕೆ. ಜಯಪ್ಪ, ರಾಮಚಂದ್ರಪ್ಪ, ಅಲಗಿಲವಾಡದ ವಿಶ್ವನಾಥ, ಹೊಸಹಳ್ಳಿ ಮಲ್ಲೇಶ, ಎನ್.ಜಿ. ಬಸವರಾಜ, ಗುಡಿಹಳ್ಳಿ ಹಾಲೇಶ್.ಹುಲಿಕಟ್ಟಿ ಚಂದ್ರಪ್ಪ, ಕಬ್ಬಳ್ಳಿ ಪರಸಪ್ಪ, ಗೌರಿಹಳ್ಳಿ ಮಂಜುನಾಥ, ಕೆ.ಡಿ.ಮರಿಯಪ್ಪ, ಕೆ.ಡಿ. ಅಂಜಿನಪ್ಪ, ಬಿ. ವಾಗೀಶ, ನ್ಯಾಯವಾದಿ ರಾಜಪ್ಪ, ಹನುಮಂತಪ್ಪ, ಸೇರಿದಂತೆ ಇತರರು ಇದ್ದರು.

**6ನೇ ವರ್ಷದ ಪುಣ್ಯಸ್ಮರಣೆ**

**ಶ್ರೀಮತಿ ಸುಮಿತ್ರಮ್ಮ ಅಮರೇಶಪ್ಪ**

ನಿಧನ : 21.12.2017

ನೀವು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ:

ಪತಿ : ಅಮರೇಶಪ್ಪ ಮೈಲೇಶ್ವರ

ಮಕ್ಕಳಾದ : ♦ ಶ್ರೀಮತಿ ನಿರ್ಮಲಾ ಎ. ರಮೇಶ್ ♦ ಶ್ರೀಮತಿ ಸವಿತ ಎ. ಬಸವರಾಜ್ ♦ ಶ್ರೀಮತಿ ವಾಣಿಶ್ರೀ ಎ. ಆನಂದ್ ♦ ಶ್ರೀಮತಿ ಕವಿತ ಷಣ್ಮುಖಪ್ಪ

ಮತ್ತು ಮೊಮ್ಮಕ್ಕಳು ಹಾಗೂ ಬಂಧುಗಳು, ಮೊ. : 94482 48080, 98862 28382


KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಬರ ಪರಿಹಾರದ ಬಗ್ಗೆ ಡಿ.23ರಂದು ಕೇಂದ್ರದ ಸಮಿತಿ ಪರಿಶೀಲನೆ**
ನವದೆಹಲಿ : 18,171 ಕೋಟಿ ರೂ.ಗಳ ಬರ ಪರಿಹಾರಕ್ಕಾಗಿ ಕರ್ನಾಟಕ ಸರ್ಕಾರ ಸಲ್ಲಿಸಿರುವ ಪ್ರಸ್ತಾಪದ ಬಗ್ಗೆ ಕೇಂದ್ರದ ಉನ್ನತ ಹಂತದ ಸಮಿತಿ ಡಿಸೆಂಬರ್ 23ರಂದು ಪರಿಶೀಲಿಸಲಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದ್ದಾರೆ.

**ರೀಲ್‌ಗಾಗಿ ಪ್ರಾಣ ತೆತ್ತ ಮೂವರು**
ಕೊಲ್ಕೊತಾ : ರೈಲ್ವೆ ಸೇತುವೆಯ ಹಳಿಗಳ ಮೇಲೆ ಸಾಮಾಜಿಕ ಜಾಲತಾಣಗಳಿಗಾಗಿ ರೀಲ್‌ಗಳನ್ನು ಚಿತ್ರೀಕರಿಸುತ್ತಿದ್ದ ಮೂವರು ಯುವಕರು ರೈಲಿಗೆ ಸಿಲುಕಿ ಸಾವನ್ನಪ್ಪಿದ್ದಾರೆ. ಪಶ್ಚಿಮ ಬಂಗಾಳದ ಮುರ್ಷಿದಾಬಾದ್‌ನಲ್ಲಿ ಈ ಘಟನೆ ನಡೆದಿದೆ. ಈ ಮೂವರು ಜೊತೆಗಿದ್ದ ಇನ್ನಿಬ್ಬರು ಸೇತುವೆ ಕೆಳಗಿದ್ದ ನದಿಗೆ ಹಾರಿ ಪ್ರಾಣ ಉಳಿಸಿಕೊಂಡಿದ್ದಾರೆ.

**ವೈಯಕ್ತಿಕ ಅವಮಾನ ಸಹಿಸುತ್ತೇನೆ, ಹುದ್ದೆಗೆ ಅವಮಾನ ಒಪ್ಪುವುದಿಲ್ಲ : ಧನಕರ್**
ನವದೆಹಲಿ : ತೃಣಮೂಲ ಕಾಂಗ್ರೆಸ್ ಪಕ್ಷದ ಸಂಸದ ತಮ್ಮನ್ನು ಅಣಕವಾಡಿರುವ ಬಗ್ಗೆ ಪ್ರತಿಕ್ರಿಯಿಸಿರುವ ರಾಜ್ಯಸಭಾಧ್ಯಕ್ಷ ಜಗದೀಪ್ ಧನಕರ್, ನನಗೆ ಮಾಡುವ ಅವಮಾನವನ್ನು ಸಹಿಸಿಕೊಳ್ಳುತ್ತೇನೆ. ಆದರೆ, ಸಂಸತ್ತಿಗೆ ಹಾಗೂ ಉಪ ರಾಷ್ಟ್ರಪತಿ ಹುದ್ದೆಗೆ ಆಗುವ ಅವಮಾನ ಸಹಿಸುವುದಿಲ್ಲ ಎಂದಿದ್ದಾರೆ.

**ಮೋದಿ ಸರ್ಕಾರದ ನಂತರ ಶಾಲೆ, ಉನ್ನತ ಶಿಕ್ಷಣ ದಾಖಲಾತಿ ಶೇ.26.5ರಷ್ಟು ಹೆಚ್ಚಳ**
ನವದೆಹಲಿ : ಕೇಂದ್ರದಲ್ಲಿ ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಶಾಲೆ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಾಖಲಾಗುವ ವಿದ್ಯಾರ್ಥಿಗಳ ಪ್ರಮಾಣ ಶೇ.26.5ರಷ್ಟು ಹೆಚ್ಚಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜ್ಯಸಭೆಗೆ ತಿಳಿಸಿದ್ದಾರೆ.

**ಜೆಎನ್.1 ಕಾರಣದಿಂದ ಸಾರ್ವಜನಿಕ ಆರೋಗ್ಯಕ್ಕೆ ಅಪಾಯವಿಲ್ಲ**
ನವದೆಹಲಿ : ಕೊರೊನಾದ ಜೆಎನ್.1 ಉಪತಳಿಯಿಂದ ಸಾರ್ವಜನಿಕ ಆರೋಗ್ಯಕ್ಕೆ ಹೆಚ್ಚು ಅಪಾಯವಿಲ್ಲ. ರೂಪಾಂತರಿ ಹುಟ್ಟಿಕೊಂಡಿರುವುದು ಅಚ್ಚರಿ ಇಲ್ಲವೇ ಚಿಂತೆಗೀಡು ಮಾಡುವಂಥದ್ದಲ್ಲ ಎಂದು ಹಲವಾರು ವಿಜ್ಞಾನಿಗಳು ಹೇಳಿದ್ದಾರೆ. ಆದರೆ, ಮುನ್ನೆಚ್ಚರಿಕೆ ಕ್ರಮವನ್ನು ಮುಂದುವರೆಸಬೇಕಿದೆ ಎಂದೂ ಅವರು ತಿಳಿಸಿದ್ದಾರೆ.

**ಬಿಹಾರದ ಉಪ ಮುಖ್ಯಮಂತ್ರಿಗೆ ಜಾರಿ ನಿರ್ದೇಶನಾಲಯದ ಸಮನ್ಸ್**
ನವದೆಹಲಿ : ರೈಲ್ವೆ ಉದ್ಯೋಗಕ್ಕಾಗಿ ಜಮೀನು ಪಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಕ್ರಮ ಹಣದ ವಿಚಾರಣೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು ಬಿಹಾರದ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಹಾಗೂ ಅವರ ತಂದೆ ಆರ್.ಜೆ.ಡಿ. ಅಧ್ಯಕ್ಷ ಲಾಲು ಪ್ರಸಾದ್ ಅವರಿಗೆ ಸಮನ್ಸ್ ಕಳಿಸಿದೆ.

**ಮಧ್ಯಪ್ರದೇಶ : ವಿಧಾನಸಭೆಯಲ್ಲಿ ಚಿತ್ರಗಳ ಅಳವಡಿಕೆಗೆ ಶಾಸಕರ ಸಮಿತಿ ರಚನೆ**
ಭೂಪಾಲ್ : ಮಧ್ಯ ಪ್ರದೇಶ ವಿಧಾನಸಭೆಯಲ್ಲಿ ಜವಾಹರಲಾಲ್ ನೆಹರು ಭಾವಚಿತ್ರವನ್ನು ಅಳವಡಿಸುವಂತೆ ಕಾಂಗ್ರೆಸ್ ಒತ್ತಾಯಿಸಿದೆ. ಈ ಹಿನ್ನೆಲೆಯಲ್ಲಿ ಮಹನೀಯರ ಚಿತ್ರಗಳನ್ನು ಸದನದಲ್ಲಿ ಅಳವಡಿಸುವ ಕುರಿತು ಶಾಸಕರ ಸಮಿತಿಯೊಂದನ್ನು ರಚಿಸುವುದಾಗಿ ವಿಧಾನಸಭಾಧ್ಯಕ್ಷ ನರೇಂದ್ರ ಸಿಂಗ್ ತೋಮರ್ ತಿಳಿಸಿದ್ದಾರೆ.

**ಲಂಕಾಗೆ 250 ದಶಲಕ್ಷ ಡಾಲರ್ ಎರಡನೇ ಕಂತಿನ ಸಾಲ**
ಕೊಲಂಬೊ : ಶ್ರೀಲಂಕಾದ ಸುಧಾರಣಾ ಯೋಜನೆಗಳ ಪ್ರಗತಿ ಬಗ್ಗೆ ತೃಪ್ತಿ ಇದೆ ಎಂದು ಹೇಳಿರುವ ವಿಶ್ವ ಬ್ಯಾಂಕ್, ಲಂಕಾಗೆ ಎರಡನೇ ಕಂತಿನ ಸಾಲವಾದ 250 ದಶಲಕ್ಷ ಡಾಲರ್ ಬಿಡುಗಡೆ ಮಾಡಿದೆ. ಇದು ದೇಶದ ಆರ್ಥಿಕ ಪರಿಸ್ಥಿತಿ ಸ್ಥಿರಗೊಳಿಸಲು ನೆರವಾಗಲಿದೆ.

**ಚೀನಾ : ಭೂಕಂಪದಿಂದ ಮೃತರ ಸಂಖ್ಯೆ 131ಕ್ಕೆ ಏರಿಕೆ**
ಬೀಜಿಂಗ್ : ಚೀನಾದಲ್ಲಿ ಸಂಭವಿಸಿದ ಭೂಕಂಪದಿಂದ ಮೃತರ ಸಂಖ್ಯೆ 131ಕ್ಕೆ ಏರಿಕೆಯಾಗಿದೆ ಹಾಗೂ 700ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಗನ್ಸು ಹಾಗೂ ಕಿಂಘೇ ಪ್ರಾಂತ್ಯಗಳಲ್ಲಿ ಭೂಕಂಪ ಸಂಭವಿಸಿತ್ತು. ನೆರವು ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಗಿದೆ.

## ಮೇವಿನ ಕೊರತೆಯಾಗದಿರುವಂತೆ ಕ್ರಮ

**(1ನೇ ಪುಟದಿಂದ)** ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಿ. ಸುರೇಶ್ ಇಟ್ನಾಳ್ ಮಾತನಾಡಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ರೈತರು ಮೇವಿನ ಬೆಳೆ ಬೆಳೆಯಲು ಸರ್ಕಾರದಿಂದ ಎಕರೆಗೆ ರೂ. 16,000 ಸಹಾಯಧನ ಸೌಲಭ್ಯ ಒದಗಿಸುತ್ತಿದ್ದು, ರೈತರು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆ ಉಂಟಾದಲ್ಲಿ ಅಂತಹ ಪ್ರದೇಶಗಳಲ್ಲಿ ನೀರಿನ ತೊಟ್ಟಿಗಳನ್ನು ನಿರ್ಮಿಸಿ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದರು.

ಪಶುಸಂಗೋಪನೆ ಇಲಾಖೆ ಉಪ-ನಿರ್ದೇಶಕ ಚಂದ್ರಶೇಖರ್ ಸುಂಕದ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ರಾಘವೇಂದ್ರ ಪ್ರಸಾದ್, ಶಿವಮೊಗ್ಗ ಹಾಲು ಒಕ್ಕೂಟದ ಉಪ ವ್ಯವಸ್ಥಾಪಕರಾದ ಡಾ. ಜೆ. ಎಸ್. ಸ್ಮಿತಾ, ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಪಶುವೈದ್ಯ ಡಾ .ಜಿ.ಕೆ. ಜಯದೇವಪ್ಪ, ಡಾ. ವಿಶ್ವನಾಥ್, ರೇಷ್ಮೆ ಇಲಾಖೆ ಉಪ-ನಿರ್ದೇಶಕ ಚಂದ್ರಪ್ಪ, ಉಪಸ್ಥಿತರಿದ್ದರು.

# ಔಷಧ ಕ್ಷೇತ್ರದಲ್ಲಿನ ಅಕ್ರಮ ದಂಧೆಗೆ ಕಡಿವಾಣ ಹಾಕಬೇಕು

## ಕರ್ನಾಟಕ ರಾಜ್ಯ ಔಷಧ ಮತ್ತು ಮಾರಾಟ ಪ್ರತಿನಿಧಿಗಳ ಸಂಘದಿಂದ ಪ್ರತಿಭಟನೆ

ದಾವಣಗೆರೆ, ಡಿ. 20- ಔಷಧ ಕ್ಷೇತ್ರದಲ್ಲಿ ಅಕ್ರಮವಾಗಿ ನಡೆಯುತ್ತಿದೆ ಎನ್ನಲಾದ ಮಾರಾಟ ದಂಧೆಗೆ ಕಡಿವಾಣ ಹಾಕಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಔಷಧ ಮತ್ತು ಮಾರಾಟ ಪ್ರತಿನಿಧಿಗಳ ಸಂಘದ ಸದಸ್ಯರು ಮಹಾನಗರ ಪಾಲಿಕೆ ಕಚೇರಿ ಮುಂಭಾಗದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ಸಂಘದ ಪ್ರಮುಖ ಕೆ.ಹೆಚ್. ಆನಂದರಾಜ್ ಮಾತನಾಡಿ, ಖಾಸಗಿ ಬಹುರಾಷ್ಟ್ರೀಯ ಕಂಪನಿಗಳು ಭ್ರಷ್ಟ ವ್ಯವಸ್ಥೆಯ ಮೂಲಕ ತಮ್ಮ ಲಾಭಕೋರತನದಿಂದ ಜನರಿಗೆ ಅವಶ್ಯಕವಾದ ಔಷಧಿಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಮೂಲಕ ಅದನ್ನು ಬಳಸುವ ರೋಗಿಗಳ ಆರೋಗ್ಯವನ್ನು ಮತ್ತಷ್ಟು ಹಾಳು ಮಾಡುತ್ತಿವೆ ಎಂದರು.

ಜನರ ಆರೋಗ್ಯವನ್ನು ರಕ್ಷಿಸಬೇಕಾದ ಕೇಂದ್ರ ಸರ್ಕಾರವು ಕಂಡು ಕಾಣದಂತೆ ವರ್ತಿಸುತ್ತಿದೆ. ಮಾತ್ರವಲ್ಲ ಸಾರ್ವಜನಿಕ ವಲಯದ ಔಷಧಿ ಕಂಪನಿಗಳನ್ನು ಮುಚ್ಚುವ ಮೂಲಕ ಖಾಸಗಿ ಕಂಪನಿಗಳ ಲಾಭಕೋರತನವನ್ನು ಸರ್ಕಾರವೇ ಬೆಂಬಲಿಸುತ್ತಿರುವುದು ದುರದೃಷ್ಟಕರ ಎಂದು ಹೇಳಿದರು.

ಈ ವ್ಯವಸ್ಥೆಯಿಂದ ಖಾಸಗಿ ಬಹುರಾಷ್ಟ್ರೀಯ



ಕಂಪನಿಗಳು ತಮ್ಮ ಇಚ್ಛೆ ಬಂದಷ್ಟು ಔಷಧಿಗಳ ಬೆಲೆಗಳ ಏರಿಕೆಗೆ ಅವಕಾಶ ನೀಡಿದಂತಾಗಿದೆ. ಔಷಧಿಗಳ ಎಂಆರ್‌ಪಿ ಮೇಲೆ ಪ್ರತಿ ವರ್ಷ ಶೇ. 10 ರಷ್ಟು ಬೆಲೆ ಹೆಚ್ಚಿಸುವ ಅವಕಾಶವನ್ನು ಕೇಂದ್ರ ಸರ್ಕಾರ ಮಾಡಿದೆ. ಇದರಿಂದಾಗಿ ಇಡೀ ಆರೋಗ್ಯ ಕ್ಷೇತ್ರವೇ ಖಾಸಗಿಯವರ ದಾಳಕ್ಕೆ ಸಿಲುಕಿದೆ. ಇದರ ಪರಿಣಾಮ ಅಲ್ಲಿ ಚಿಕಿತ್ಸೆ ಪಡೆಯುವುದು ಸಂಪೂರ್ಣ ಹಣದ ಮೇಲೆ ನಿಂತಿದೆ. ಇದರಿಂದ ರೋಗಿಗಳ ಜೀವ ಸದಾ ಅಪಾಯದಲ್ಲಿದೆ ಎಂದು ತಿಳಿಸಿದರು.

ಔಷಧಿ ಮಾರಾಟ ಪ್ರತಿನಿಧಿಗಳಿಗೆ ಯಾವುದೇ ಕನಿಷ್ಠ ವೇತನ, ಸಾಮಾಜಿಕ ಭದ್ರತೆ ಇಲ್ಲ. ಇಲ್ಲಿ ಕಾರ್ಮಿಕ ಕಾನೂನು ಉಲ್ಲಂಘನೆ ಎಂಬುದು ನಿತ್ಯ ನಡೆಯುತ್ತಲೇ ಇದೆ. ಹಲವಾರು ವರ್ಷಗಳಿಂದ ಬೆಂಗಳೂರಿನಲ್ಲಿರುವ ಔಷಧ ಕಂಪನಿಗಳ ದಾಖಲೆಗಳನ್ನು ಪರಿಶೀಲಿಸಲು ಸಂಘಟನೆಯಿಂದ ಒತ್ತಾಯ ಮಾಡಲಾಗಿದ್ದರೂ ಸಹ ಯಾವುದೇ ಕ್ರಮ ಜರುಗಿಸಿಲ್ಲ ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರ ಕಾರ್ಮಿಕ ಕಾನೂನು ತಿದ್ದುಪಡಿ ಮಾಡುವ ಮೂಲಕ ಕಾರ್ಮಿಕರನ್ನು ಶೋಷಣೆ ಮಾಡಿ ಮಾಲೀಕರನ್ನು ಪೋಷಣೆ ಮಾಡುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಜಾರಿ ಮಾಡಿರುವುದರಿಂದ ಮಾರಾಟ ಪ್ರತಿನಿಧಿಗಳ ರಕ್ಷಣೆಗೆ ಇದ್ದಂತಹ ಎಸ್‌ಪಿಇ ಕಾಯ್ದೆ ರದ್ದಾಗಲಿದೆ ಎಂದರು.

ಆಸ್ಪತ್ರೆಗಳಲ್ಲಿ ಔಷಧ ಮಾರಾಟ ಪ್ರತಿನಿಧಿಗಳ ಪ್ರವೇಶ ನಿರ್ಬಂಧ ಹೇರಿರುವುದು. ಸೇವಾ ಷರತ್ತುಗಳು ಮತ್ತು ಕೆಲಸದ ಅವಧಿಯನ್ನು ನಿಗದಿ ಮಾಡದೇ ಜಿಪಿಆರ್‌ಎಸ್ ಮತ್ತು ಜಿಯೋ ಟ್ಯಾಗಿಂಗ್ ಮೂಲಕ ಗೌಪ್ಯತೆ ಬಹಿರಂಗಪಡಿಸುವ ಮೂಲಕ ಸುಮಾರು 13 ರಿಂದ 15 ಗಂಟೆಗಳ ಕಾಲ ಕೆಲಸ ಮಾಡಿಸುವ ಮೂಲಕ ಮಾರಾಟ ಪ್ರತಿನಿಧಿಗಳ ಮೇಲೆ ನಡೆಯುತ್ತಿರುವ ಶೋಷಣೆಯು ಸಂವಿಧಾನ ವಿರೋಧಿ ನಡೆಯಾಗಿದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಲೋಹಿತಾಶ್ವ, ವೆಂಕಟೇಶ್, ಶಶಿ ಆಚಾರ್, ಆಫ್ರೋಜ್ ಮತ್ತಿತರರು ಭಾಗವಹಿಸಿದ್ದರು.

## ವೀರಶೈವ-ಲಿಂಗಾಯತ ಅಧಿವೇಶನದ ಯಶಸ್ಸಿಗೆ ಜಗಳೂರು ಸಮಾಜದ ಕರೆ



ಜಗಳೂರು, ಡಿ.20- ಇದೇ ದಿನಾಂಕ 23, 24 ರಂದು ದಾವಣಗೆರೆಯಲ್ಲಿ ನಡೆಯಲಿರುವ ಅಖಿಲ ಭಾರತ ವೀರಶೈವ- ಲಿಂಗಾಯತ 24 ನೇ ಮಹಾ ಅಧಿವೇಶನಕ್ಕೆ ತಾಲ್ಲೂಕಿನ ಸಮಾಜದವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಮಹಾ ಅಧಿವೇಶನ ಯಶಸ್ವಿಗೊಳಿಸಬೇಕು ಎಂದು ತಾಲ್ಲೂಕು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಅಧ್ಯಕ್ಷ ಜೆ.ಎನ್. ಶಿವನಗೌಡ್ರು ಮನವಿ ಮಾಡಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ದಿನಾಂಕ 23 ರಂದು ಗ್ರಾಮ ಪಂಚಾಯಿತಿಗೆ ಒಂದು ಬಸ್‌ನಂತೆ ತಾಲ್ಲೂಕಿನ 22 ಗ್ರಾಮ ಪಂಚಾಯಿತಿ ವ್ಯಾಪ್ತಿಗೆ 22 ಬಸ್‌ಗಳು, ಪಟ್ಟಣಕ್ಕೆ ಎರಡರಿಂದ ಮೂರು ಬಸ್‌ಗಳನ್ನು ವ್ಯವಸ್ಥೆ ಮಾಡಲಾಗಿದೆ. 24 ರಂದು ನಡೆಯುವ ಮಹಾ ಅಧಿವೇಶನ ಸಭೆಗೆ ತಮ್ಮ ವಾಹನಗಳ ಮೂಲಕ ಬರಲಿದ್ದಾರೆ ಎಂದವರು ತಿಳಿಸಿದರು.

ಮಹಾಸಭಾದ ಮುಖಂಡ ವೈ.ಎನ್. ಮಂಜುನಾಥ್ ಮತ್ತು ಮಾಜಿ ಅಧ್ಯಕ್ಷ ಎಂ.ಎಸ್.ಪಾಟೀಲ್ ಮಾತನಾಡಿ, ಈ ಅಧಿವೇಶನವು ವೀರಶೈವ-ಲಿಂಗಾಯತ ಸಮಾಜದವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮೇಲೆ ಓಬಿಸಿ ಅಡಿ ಮೀಸಲಾತಿ ನೀಡುವಂತೆ ಒತ್ತಾಯ ಜೊತೆಗೆ ನಮ್ಮ ಹಕ್ಕುಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಮಹಿಳಾ ಘಟಕದ ಅಧ್ಯಕ್ಷೆ ರೇಖಾ ಶಿವಕುಮಾರ್, ನಗರ ಘಟಕದ ಅಧ್ಯಕ್ಷ ನಾಗರಾಜ, ಮುಖಂಡರುಗಳಾದ ಮೆದಗಿನಕೆರೆ ವೀರೇಂದ್ರ ಪಾಟೀಲ್, ಗೋಡೆ ಪ್ರಕಾಶ್, ಮುಸ್ಟೂರು ಲಿಂಗೇಶ್, ಶಿವಕುಮಾರ್ ಮುಂತಾದವರು ಇದ್ದರು.

## ಹೊನ್ನಾಳಿ ತಾಲ್ಲೂಕಿಗೆ ಆಹಾರ ಧಾನ್ಯ ಹಂಚಿಕೆ

ಹೊನ್ನಾಳಿ, ಡಿ.20- ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಹೊನ್ನಾಳಿ ತಾಲ್ಲೂಕಿನ ಪಡಿತರ ಚೀಟಿದಾರರಿಗೆ ಡಿಸೆಂಬರ್ ಮಾಹೆಯಲ್ಲಿ ಬಿಡುಗಡೆಯಾದ ಪಡಿತರ ಆಹಾರ ಧಾನ್ಯವನ್ನು ಹಂಚಿಕೆ ಮಾಡಲಾಗಿದೆ.

ಅಂತ್ಯೋದಯ ಪಡಿತರ ಚೀಟಿದಾರರಿಗೆ 21 ಕೆ.ಜಿ. ಅಕ್ಕಿ ಮತ್ತು ರಾಗಿ 14 ಕೆ.ಜಿ. ಪ್ರತಿ ಕಾರ್ಡಿಗೆ, ಆದ್ಯತಾ ಹಾಗೂ ಬಿ.ಪಿ.ಎಲ್ ಪಡಿತರ ಚೀಟಿದಾರರಿಗೆ 3 ಕೆ.ಜಿ. ಅಕ್ಕಿ ಮತ್ತು ಪ್ರತಿ ಸದಸ್ಯರಿಗೆ 2 ಕೆ.ಜಿ. ರಾಗಿ ಉಚಿತವಾಗಿ ವಿತರಿಸಲಾಗುತ್ತದೆ ಹಾಗೂ ಪ್ರತಿ ಕೆ.ಜಿ.ಗೆ ರೂ.15 ರಂತೆ ಒಪ್ಪಿಗೆ ನೀಡಿದ ಎ.ಪಿ.ಎಲ್. ಏಕ ಸದಸ್ಯ ಪಡಿತರ ಚೀಟಿದಾರರಿಗೆ 5 ಕೆ.ಜಿ., ಎರಡು ಮತ್ತು ಹೆಚ್ಚಿನ ಸದಸ್ಯರನ್ನು ಹೊಂದಿರುವವರಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು.

ಪಡಿತರ ಚೀಟಿದಾರರ ಖಾತೆಗೆ ನೇರ ನಗದು ವರ್ಗಾವಣೆಗೆ ಸಂಬಂಧಿಸಿದಂತೆ ಪಡಿತರ ಚೀಟಿದಾರರು ಕಡ್ಡಾಯವಾಗಿ ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆಯನ್ನು ಮಾಡಿಸಿಕೊಳ್ಳಬೇಕು ಹಾಗೂ ಹಣ ಪಡೆಯಲು ಯಾವುದೇ ತಾಂತ್ರಿಕ ಸಮಸ್ಯೆಗಳಿ ದ್ದಲ್ಲಿ ತಮ್ಮ ಬ್ಯಾಂಕ್ ಶಾಖೆಗಳಿಗೆ ಹಾಗೂ ಸ್ಥಳೀಯ ಆಹಾರ ನಿರೀಕ್ಷಕರನ್ನುಸಂಪರ್ಕಿಸಿ ಸರಿಪಡಿಸಿಕೊಳ್ಳಬೇಕು ಎಂದು ಹೊನ್ನಾಳಿ ತಹಶೀಲ್ದಾರ್ ಪಟ್ಟರಾಜಗೌಡ ತಿಳಿಸಿದ್ದಾರೆ.

## ಲಂಚ ಪ್ರಕರಣದಿಂದ ಮಾಡಾಳ್ ಮುಕ್ತ

**(1ನೇ ಪುಟದಿಂದ)** ನಡೆಸಲಾಗಿದೆ ಎಂಬ ತಾಂತ್ರಿಕ ಕಾರಣದಿಂದ ಪ್ರಕರಣ ರದ್ದುಗೊಳಿಸಿದೆ.

ಮಾಡಾಳ್ ವಿರೂಪಾಕ್ಷಪ್ಪ ಪರ ವಾದ ಮಂಡಿಸಿದ ಹಿರಿಯ ವಕೀಲ ಪ್ರಭುಲಿಂಗ ನಾವಡಗಿ ಅವರು, ಲೋಕಾ ಯುಕ್ತ ಪೊಲೀಸರು ಭ್ರಷ್ಟಾಚಾರ ತಡೆ ಕಾಯ್ದೆ ಸೆಕ್ಷನ್ 17 ಎ ಪ್ರಕಾರ ಪ್ರಕ್ರಿಯೆ ಪಾಲಿಸಿಲ್ಲ ಮತ್ತು ತನಿಖೆಗೆ ವಿಧಾನ ಸಭಾಧ್ಯಕ್ಷರ ಅನುಮತಿ ಪಡೆದಿಲ್ಲ ಎಂದು ಹೇಳಿದರು.

ಆರೋಪಿ ಪರ ವಕೀಲರ ವಾದ ಪುರಸ್ಕರಿಸಿದ ಹೈಕೋರ್ಟ್, ಮಾಡಾಳ್ ವಿರೂಪಾಕ್ಷಪ್ಪ ವಿರುದ್ಧದ ಪ್ರಕರಣ ರದ್ದುಗೊಳಿಸಿದೆ.

ಮಾಡಾಳ್ ಅವರ ಪುತ್ರ ಕೆಎಎಸ್ ಅಧಿಕಾರಿ ಪ್ರಶಾಂತ್ ಮಾಡಾಳ್ ಲಂಚ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದರು. ಬಳಿಕ ಶಾಸಕರ ಕಚೇರಿ ಮತ್ತು ಮನೆಯಲ್ಲಿ 8 ಕೋಟಿ ರೂಪಾಯಿ ಹೆಚ್ಚು ನಗದು ಪತ್ತೆಯಾಗಿತ್ತು. ಇದರಿಂದ ಆಗ ಅಧಿಕಾರದಲ್ಲಿದ್ದ ಬಿಜೆಪಿಗೆ ಭಾರೀ ಮುಖಭಂಗವಾಗಿತ್ತು.

## ಆಸಕ್ತಿಯ ರೂಪಾಂತರಿ

**(1ನೇ ಪುಟದಿಂದ)** ಸಾರ್ವಜನಿಕ ಆರೋಗ್ಯದ ಮೇಲೆ ಇದರಿಂದ ಆಗುವ ಪರಿಣಾಮ ಕಡಿಮೆ. ಆದರೆ, ಹಲವು ದೇಶಗಳು ಈಗ ಚಳಿಗಾಲ ಪ್ರವೇಶಿಸುತ್ತಿರುವುದರಿಂದ ವೈರಲ್ ಹಾಗೂ ಬ್ಯಾಕ್ಟೀರಿಯಾ ಸೋಂಕುಗಳ ಬಗ್ಗೆ ಎಚ್ಚರಿಕೆ ವಹಿಸಬೇಕಿದೆ ಎಂದು ವಿಶ್ವ ಆರೋಗ್ಯ ಸಂಘಟನೆ ಹೇಳಿದೆ.

## ಇಂದಿನಿಂದ ಮೂರು ದಿನ ಕಾನಾಮಡುವಿನಲ್ಲಿ ಜಾತ್ರೆ



ಜಗಳೂರು ತಾಲ್ಲೂಕಿನ ಶ್ರೀ ಕ್ಷೇತ್ರ ಕಾನಮಡುವಿನ ಶ್ರೀ ಶರಣ ಬಸವೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಇಂದಿನಿಂದ ಮೂರು ದಿನ ಜರುಗಲಿದೆ ಎಂದು ಧರ್ಮಾಧಿಕಾರಿ ಶ್ರೀ ದಾ.ಮ.ಐಮಡಿ ಶರಣಾರ್ಯರು ತಿಳಿಸಿದ್ದಾರೆ.

ಇಂದು ಸಂಜೆ 6 ಗಂಟೆಗೆ ಕಾರ್ತಿಕ ದೀಪೋತ್ಸವ, ನಾಳೆ ಶುಕ್ರವಾರ ಸಂಜೆ 4 ಗಂಟೆಗೆ ಸ್ವಾಮಿ ರಥೋತ್ಸವ, ನಾಡಿದ್ದು ದಿನಾಂಕ 23 ಶನಿವಾರ ಸಂಜೆ 6ಕ್ಕೆ ಸ್ವಾಮಿಯ ಪಲ್ಲಕ್ಕಿ ಉತ್ಸವ ನಡೆಯಲಿದ್ದು ಮುಸ್ಟೂರು ಓಂಕಾರೇಶ್ವರ ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಕೊಟ್ಟೂರು ಹಿರೇಮಠದ ಶ್ರೀ ಯೋಗಿ ರಾಜೇಂದ್ರ ಶಿವಾಚಾರ್ಯ ಸ್ವಾಮೀಜಿ, ಚನ್ನಗಿರಿ ಹಿರೇಮಠದ ಶ್ರೀ ಕೇದಾರಲಿಂಗ ಶಿವಾಚಾರ್ಯ ಸ್ವಾಮೀಜಿ, ಕೂಡ್ಲಿಗಿ ಶ್ರೀ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸಲಿದ್ದಾರೆ.

ಚಿತ್ರದುರ್ಗದ ಗಂಜಿಗಟ್ಟೆ ಕೃಷ್ಣಮೂರ್ತಿ ಮತ್ತು ತಂಡದವರಿಂದ ಇಂದು ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಧಾತ್ರಿ ರಂಗ ಸಂಸ್ಥೆ ಸಿರಿಗೆರೆ ಅವರಿಂದ ಅಕ್ಕನಾಗಲಾಂಬಿಕೆ ನಾಟಕ ಅಭಿನಯ, ನಂತರ ಭಜನಾ ಕಾರ್ಯಕ್ರಮವಿರುತ್ತದೆ.

ದಿನಾಂಕ 22 ಶುಕ್ರವಾರ ರಕ್ತದಾನ ಶಿಬಿರ, ಸಾಮೂಹಿಕ ವಿವಾಹ, ಭರತನಾಟ್ಯ, ಜಾನಪದ, ವಚನ ನೃತ್ಯಗಳು, ರಾತ್ರಿ ಮರಿಯಮ್ಮನಹಳ್ಳಿ ರಂಗಚೇತನ ಕಲಾ ಟ್ರಸ್ಟ್ ವತಿಯಿಂದ ಕರ್ಣಭಾರ ನಾಟಕ ಅಭಿನಯವಿರುತ್ತದೆ.

## ಪ್ರತಿಯೊಂದರಲ್ಲೂ ಜಾತಿ ಎಳೆದು ತರಬಾರದು

### ನಾನು ಜಾಟ್ ಎಂದ ಉಪರಾಷ್ಟ್ರಪತಿಗೆ ಖರ್ಗೆ ಪ್ರತ್ಯುತ್ತರ

ನವದೆಹಲಿ, ಡಿ. 20 – ಜಾಟ್ ಸಮುದಾಯಕ್ಕೆ ಸೇರಿದವರೆಂಬ ಕಾರಣಕ್ಕೆ ಅಣಕಿಸಲಾಗಿದೆ ಎಂದು ರಾಜ್ಯಸಭಾಧ್ಯಕ್ಷ ಜಗದೀಪ್ ಧನಕರ್ ಹೇಳಿರುವುದನ್ನು ತಳ್ಳಿ ಹಾಕಿರುವ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ, ಪ್ರತಿಯೊಂದು ವಿಷಯದಲ್ಲೂ ಜಾತಿ ಎಳೆದು ತರಬಾರದು ಎಂದಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು ದಲಿತ ಎಂಬ ಕಾರಣಕ್ಕಾಗಿ ರಾಜ್ಯಸಭೆಯಲ್ಲಿ ಮಾತನಾಡಲು ಅವಕಾಶ ನೀಡುತ್ತಿಲ್ಲ ಎಂದು ಹೇಳಬಹುದೇ? ಸಭಾಧ್ಯಕ್ಷರ ಕೆಲಸ ಇತರೆ ಸದಸ್ಯರನ್ನು ರಕ್ಷಿಸುವುದಾಗಿದೆ.

ಆದರೆ, ಅವರೇ ಇಂತಹ ಹೇಳಿಕೆ ನೀಡುತ್ತಿದ್ದಾರೆ ಎಂದು ತಿಳಿಸಿದರು.

ಸಂವಿಧಾನಿಕ ಹುದ್ದೆಯಲ್ಲಿರುವವರು ತಮ್ಮ ಜಾತಿ ಪ್ರಸ್ತಾಪಿಸುವುದು ದೇಶಕ್ಕೆ ದುಃಖಕರ ದಿನ ಎಂದು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಹೇಳಿದ್ದಾರೆ.

ಪ್ರತಿಯೊಬ್ಬರೂ ತಮ್ಮ ಜಾತಿಯ ಪಟ್ಟಿಯನ್ನು ಕಟ್ಟಿಕೊಂಡೇ ತಿರುಗಬೇಕೇ? ಎಂದು ಪ್ರಶ್ನಿಸಿರುವ ಚೌಧರಿ, ಸರ್ಕಾರ ಈ ರೀತಿಯ ವಿಷಯಗಳನ್ನು ಕೆದಕುವ ಮೂಲಕ ಸಂಸತ್ತಿನ ಭದ್ರತಾ ಲೋಪ ಮರೆ ಮಾಚಲು ಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ.

# ಕ್ರಿಯಾಶೀಲ ಪ್ರಗತಿಪರ ರೈತ ದ್ಯಾಮಪ್ಪಗೆ ರಾಷ್ಟ್ರೀಯ ಮಿಲೇನಿಯರ್ ಪ್ರಶಸ್ತಿ

ದಾವಣಗೆರೆ, ಡಿ. 20 - ತಾಲ್ಲೂಕಿನ ಹಾಲುವರ್ತಿ ಗ್ರಾಮದ ಪ್ರಗತಿಪರ ರೈತ ದ್ಯಾಮಣ್ಣ ಅವರಿಗೆ ನವದೆಹಲಿಯಲ್ಲಿ ನಡೆದ 'ಮಹೇಂದ್ರ ಟ್ರ್ಯಾಕ್ಟರ್ಸ್' ರವರ 'ರಾಷ್ಟ್ರೀಯ ಕೃಷಿ ಜಾಗರಣೆ ಮಿಲೇನಿಯರ್ ಫಾರ್ಮರ್' ಪ್ರಶಸ್ತಿ ಲಭಿಸಿದೆ.

ಕೃಷಿಯಲ್ಲಿ ಸದಾ ಪ್ರಗತಿಪರ ಚಿಂತನೆ, ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡಿರುವ ಇವರನ್ನು, ನಗರದ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ನಾಮ ನಿರ್ದೇಶನ ಮಾಡಲಾಗಿತ್ತು.

ಕೃಷಿ ಬೆಳೆಗಳಾದ ಮೆಕ್ಕೆಜೋಳ, ತೊಗರಿ, ರಾಗಿ, ತೋಟಗಾರಿಕೆ ಬೆಳೆಗಳಾದ ಅಡಿಕೆ, ತೆಂಗು, ಈರುಳ್ಳಿ, ಗುಲಾಬಿ, ಕೃಷಿ ಉತ್ತೇಜಿತ ಉಪಕಸುಬುಗಳಾದ ಹೈನುಗಾರಿಕೆ, ಮೀನುಗಾರಿಕೆಯಲ್ಲಿ ದ್ಯಾಮಣ್ಣ ಪರಿಣಿತರು.

ಕೇಂದ್ರ ಸಚಿವ ಸಾಧ್ವಿ ನಿರಂಜನ್ ಜ್ಯೋತಿ ಹಾಗೂ ಗುಜರಾತ್ ರಾಜ್ಯಪಾಲ ಆಚಾರ್ಯ ದೇವ ವ್ರತ್ ರವರಿಂದ ಪ್ರಶಸ್ತಿ ಸ್ವೀಕರಿಸಿದ ದ್ಯಾಮಣ್ಣನವರು ತಮ್ಮೆಲ್ಲಾ ಬೆಳವಣಿಗೆಗೆ ಕಾರಣೀಭೂತರಾದ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರಕ್ಕೆ ಚಿರಋಣಿಯಾಗಿರುವೆನೆಂದು ಹರ್ಷ ವ್ಯಕ್ತ ಪಡಿಸಿದರು.

ಕೃಷಿಯಲ್ಲಿ ವಿನೂತನ ತಾಂತ್ರಿಕತೆಗಳನ್ನು ಕರಗತ ಮಾಡುವುದು ಇವರಿಗೆ ಬಹಳ ಸುಲಭ. ಜೊತೆಗೆ ಕೃಷಿ ಕುಟುಂಬವನ್ನು ಲಾಭದಾಯಕವಾಗಿ ಮುನ್ನಡೆಸುವಲ್ಲಿ ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸುತ್ತಿರುವುದು, ಜಿಲ್ಲೆಯ ಇತರೆ ರೈತರಿಗೆ ಮಾದರಿ ಎಂದು ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಕಾರ್ಯದರ್ಶಿ ಡಾ. ಕೆ.ಪಿ. ಬಸವರಾಜಪ್ಪ ಅಭಿಪ್ರಾಯಪಟ್ಟರು.

ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥ ಡಾ. ಟಿ.ಎನ್. ದೇವರಾಜ ಅವರ ಮಾರ್ಗದರ್ಶನದಲ್ಲಿ ಮೀನು ಜಲ ಕೃಷಿಯನ್ನು




ಕೈಗೊಂಡು ಯಶಸ್ವಿಯಾದ ಪ್ರಗತಿಪರ ರೈತರಲ್ಲಿ ಇವರೂ ಒಬ್ಬರು. ಲಾಭದಾಯಕ ಕೃಷಿಯಲ್ಲಿ ಬಂಡವಾಳ ರಹಿತವಾಗಿ ನೈಸರ್ಗಿಕ ಕಷ್ಟಗಳನ್ನು ಅಪ್ಪಿಕೊಂಡು ಬೇಸಾಯ ಮಾಡುವುದರಲ್ಲಿ ದ್ಯಾಮಣ್ಣ ನವರು ಸಿದ್ಧಹಸ್ತರು ಎಂದು ಡಾ. ಟಿ. ಎನ್. ದೇವರಾಜ ಸಂತಸ ಹಂಚಿಕೊಂಡರು.

ಬರಗಾಲದಲ್ಲಿ ಬೋರ್‌ವೆಲ್‌ಗಳು ಬತ್ತಿ ಹೋದ ಸಂದರ್ಭದಲ್ಲಿ ತೋಟಗಾರಿಕೆ ವಿಜ್ಞಾನಿ ಬಸವನಗೌಡ ಎಂ.ಜಿ. ರವರ ಮಾರ್ಗದರ್ಶನದಲ್ಲಿ ಮಳೆನೀರು ಕೊಯ್ಲು ಮಾಡಿ ಒಂದು ಎಕರೆ ಕೃಷಿ ಹೊಂಡವನ್ನು ತೋಟಗಾರಿಕೆ ಇಲಾಖೆಯ ಅನುದಾನದಲ್ಲಿ ನಿರ್ಮಿಸಿ ಯಶಸ್ವಿಯಾಗಿ ತೋಟಗಾರಿಕೆ ಬೆಳೆಗಳಾದ ಅಡಿಕೆ, ತೆಂಗು, ಗುಲಾಬಿಯನ್ನು ಬೆಳೆಯುತ್ತಿದ್ದಾರೆ. ಈರುಳ್ಳಿಯಲ್ಲಿ 'ಭೀಮಾ ಶಕ್ತಿ' ತಳಿಯ ಯಶಸ್ವಿ ಬೆಳೆ, ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಕುರ್ಫಿ ಜ್ಯೋತಿ ಆಲೂಗಡ್ಡೆ ಬೆಳೆದ ಹೆಮ್ಮೆಯ ರೈತ ದ್ಯಾಮಣ್ಣನವರು ಎಂದು ತಜ್ಞರು ತಿಳಿಸಿದರು.

ಒಣ ಬೇಸಾಯದಲ್ಲಿ ಕೂರಿಗೆ ಭತ್ತವನ್ನು ಬೆಳೆದಿದ್ದು, ತೊಗರಿಯ ಬಿಆರ್‌ಜಿ-5 ತಳಿಯನ್ನು ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ ಬೆಳೆದು ಯಶಸ್ವಿಯಾಗಿದ್ದು, ರಾಗಿಯಲ್ಲಿ ಎಂ.ಎಲ್-365 ತಳಿಯ ಬೇಸಾಯ ಇವೆಲ್ಲಾ ಕೃಷಿಯ ಸಾಧನೆಗಳು ಎಂದು ಕೇಂದ್ರದ ಬೇಸಾಯ ತಜ್ಞ ಬಿ.ಓ. ಮಲ್ಲಿಕಾರ್ಜುನ್ ತಿಳಿಸಿದರು.

ಇದಲ್ಲದೇ ಹೈನುಗಾರಿಕೆಯಲ್ಲಿ ತನ್ನದೇ ಪ್ರಯೋಗಶೀಲತೆಯನ್ನು ಕೈಗೊಂಡಿರುವುದು ಅಭಿನಂದನಾರ್ಹ. 'ಆಟೋ ಡ್ರಿಂಕರ್ಸ್' ಎಂಬ ನೀರು ಕುಡಿಯುವ ಸಾಧನವನ್ನು ಅತೀ ಕಡಿಮೆ ಖರ್ಚಿನಲ್ಲಿ ವಿನ್ಯಾಸಗೊಳಿಸಿ ನೂರಾರು ರೈತರಿಗೆ ಮಾರ್ಗದರ್ಶನ ನೀಡಿರುವುದು ಹಾಗೂ ತೋಟಗಾರಿಕೆ ಬೆಳೆಗಳಲ್ಲಿ ಕಳೆ ನಿರ್ವಹಣೆಗೆ ಯಾಂತ್ರೀಕೃತ ಸ್ಲಾಶರ್ ಚೈನನ್ನು ಮಾರ್ಪಡಿಸಿರುವುದು ದ್ಯಾಮಣ್ಣನವರ ಕ್ರಿಯಾಶೀಲ ಬುದ್ಧಿವಂತಿಕೆಗೆ ಸಾಕ್ಷಿ.

ದ್ಯಾಮಣ್ಣನವರ ಈ ಸಾಧನೆಗೆ ಶ್ರೀ ತರಳಬಾಳು ಜಗದ್ಗುರುಗಳಾದ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಸಂತಸ ವ್ಯಕ್ತಪಡಿಸಿದ್ದಾರೆ.

## ದರ್ಗಾ ರಸ್ತೆ ಕಾಮಗಾರಿಗೆ ಚಾಲನೆ

**(1ನೇ ಪುಟದಿಂದ)** ಅವಕಾಶ ಕಲ್ಪಿಸಿ ಎಂದು ಹೇಳಿದಾಗ ಅದಕ್ಕೆ ಸಮ್ಮತಿಯನ್ನು ನೀಡಲಾಯಿತು ಎಂದರು.

ನಿನ್ನೆ ಕೂಡ ಲೋಕೋಪಯೋಗಿ ಇಲಾಖೆಯ ಅಧಿಕಾರಿ ನರೇಂದ್ರ ಬಾಬು ಜಿಲ್ಲಾಧಿಕಾರಿ ಬಳಿ ಮಾತನಾಡಿದ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಹಿಂಬದಿಯಲ್ಲಿರುವ ನೀರಿನ ಟ್ಯಾಂಕ್ ಬಳಿ ಇರುವ ಇನ್ನೊಂದಿಷ್ಟು ಜಾಗವನ್ನು ಒಡೆದು ಕಾಮಗಾರಿ ಮಾಡುವ ಉದ್ದೇಶ ಅವರದ್ದಾಗಿತ್ತು. ಹಾಗಿದ್ದರೆ ಅಕ್ರಮ ಮಾಡಿಕೊಂಡವರ ಜಾಗವನ್ನು ಮೊದಲು ವಶಪಡಿಸಿಕೊಂಡು ತದನಂತರ 120 ಅಡಿ ರಸ್ತೆಯನ್ನು ಮಾಡಬೇಕೆಂದು ತಾಕಿತು ಮಾಡಿದ್ದೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯ ಹನುಮಂತಪ್ಪ, ಗ್ರಾಮಾಂತರ ಘಟಕದ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ಮುಖಂಡರಾದ ಪರಶುರಾಮ್ ಕಾಟ್ವೆ, ರಾಜು ರೋಖಡೆ, ಹೆಚ್. ಮಂಜಾನಾಯ್ಕ್, ತುಳಜಪ್ಪ ಭೂತೆ, ರವಿಕುಮಾರ್, ವಿನಾಯಕ ಆರಾಧ್ಯಮಠ, ಐರಣಿ ನಾಗರಾಜ್, ಶ್ರೀನಿವಾಸ್ ಚಂದಪೂರ್, ಅಜ್ಜಪ್ಪ ಶೇರಾಪುರ, ರಾಜು ಸೋಳಂಕಿ, ಆಪ್ತ ಸಹಾಯಕ ಶಿವಶಂಕರ್ ಚಿಕ್ಕಬಿದರಿ. ರಾಘವೇಂದ್ರ ಸ್ವಾಮಿ ಮಠದ ಪ್ರಧಾನ ಅರ್ಚಕರು ವರಾಹಚಾರ್, ಕೆಂಚನಹಳ್ಳಿ ಶಿವಕುಮಾರ್, ಆಟೋ ರಾಜು ಇತರರು ಹಾಜರಿದ್ದರು.

**ಹೃತ್ಪೂರ್ವಕ ಅಭಿನಂದನೆಗಳು**

ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ **ಶ್ರೀಮತಿ ಜಸ್ಟಿನ್ ಡಿಸೋಜಾ** ಇವರು ಶೈಕ್ಷಣಿಕ ಕ್ಷೇತದಲ್ಲಿ ಸಲ್ಲಿಸಿರುವ ಅಪಾರ ಸೇವೆಯನ್ನು ಗುರುತಿಸಿ ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘ **ಸಿದ್ದಗಂಗಾ ಶಿವಕುಮಾರಶ್ರೀ** ಪ್ರಶಸ್ತಿ ನೀಡಿದೆ.



ಇವರಿಗೆ ಶುಭ ಕೋರುವವರು :
- ಬಾಳೆಹೊಲದ ಶ್ರೀಮತಿ ವಿಶಾಲ, ಶ್ರೀ ರೇವಣಸಿದ್ದಪ್ಪ (ಸಿದ್ದಣ್ಣ)
- ಬಾಳೆಹೊಲದ ಶ್ರೀಮತಿ ಪವಿತ್ರ, ಶ್ರೀ ಆನಂದ,
- ಶ್ರೀಮತಿ ರೇಖಾ, ಶ್ರೀ ಪ್ರಸನ್ನಕುಮಾರ ಅಡಿಷನಲ್ ಕಮೀಷನರ್, ಚೆನ್ನೈ.
- ಶ್ರೀಮತಿ ನಿಕಿತಾ, ಶ್ರೀ ವಿಜಯಕುಮಾರ ಬೆಂಗಳೂರು
- ಶ್ರೀಮತಿ ಗೌರಮ್ಮ, ಶ್ರೀ ಬಿ.ಆರ್. ಸಂತೋಷಕುಮಾರ್
- ಶ್ರೀಮತಿ ಅಕ್ಷತಾ, ಶ್ರೀ ಬಿ.ಆರ್. ಸತೀಶ್ ಕುಮಾರ್
- ಕಾರ್ತಿಕ್, ದರ್ಶನ, ನಿಶ್ಚಲ್, ಲಕ್ಷ್ಯ, ಮೋಕ್ಷ.

## ಸೀಟು ಹಂಚಿಕೆ : ಬಿಜೆಪಿ ವರಿಷ್ಠರೊಂದಿಗೆ ಹೆಚ್‌ಡಿಕೆ ಚರ್ಚೆ

**(1ನೇ ಪುಟದಿಂದ)** ದಿನಗಳ ಕಾಲ ಇರಲಿದ್ದು, ನಾಳೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ತಮ್ಮ ತಂದೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರೊಂದಿಗೆ ಭೇಟಿ ಮಾಡಲಿದ್ದಾರೆ.

ದೆಹಲಿ ಪ್ರವಾಸ ಸಂದರ್ಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಆರ್‌ಎಸ್‌ಎಸ್ ಮುಖಂಡರನ್ನು ಭೇಟಿ ಮಾಡಲಿದ್ದಾರೆ. ಎಲ್ಲಾ ಮುಖಂಡರ ಭೇಟಿ ಸಂದರ್ಭದಲ್ಲಿ ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಉಪಸ್ಥಿತರಿರಲಿದ್ದಾರೆಂದು ಪಕ್ಷದ ಮೂಲಗಳು ತಿಳಿಸಿವೆ.

**ಮಳಿಗೆ ಬಾಡಿಗೆಗೆ ಇದೆ**

ಪಿ.ಜೆ. ಬಡಾವಣೆ, 4ನೇ ಮೇನ್, 4ನೇ ಕ್ರಾಸ್,
ರಾಂ ಅಂಡ್ ಕೋ ಸರ್ಕಲ್ ಹತ್ತಿರ,
475 ಚದುರ ಅಡಿ ಇರುವ ಗ್ರೌಂಡ್ ಫ್ಲೋರ್ ಮತ್ತು
475 ಚದುರ ಅಡಿ ಇರುವ ಮೊದಲನೇ ಮಹಡಿ
ಇರುವ ಹೊಸ ಕಟ್ಟಡದ ಮಳಿಗೆ ಬಾಡಿಗೆಗೆ ಇದೆ.
ಸಂಪರ್ಕಿಸಿ. 93434 99999

**LADIES PG BUILDING FOR RENT**

ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.
Mobi. : 95351 14063, 96203 71544, 97428 35642

# ಹರಿಹರದಲ್ಲಿ ಇಂದು ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿ

ಹರಿಹರ, ಡಿ,20- ಶ್ರೀ ಕನಕದಾಸರ 536 ನೇ ಜಯಂತ್ಯೋತ್ಸವದ ಅಂಗವಾಗಿ, ಕರ್ನಾಟಕ ಕುಸ್ತಿ ಸಂಘ, ದಾವಣಗೆರೆ ಕುಸ್ತಿ ಸಂಘ ಹಾಗೂ ಹರಿಹರ ಕುಸ್ತಿ ಜೀರ್ಣೋದ್ಧಾರ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ನಾಳೆ ದಿನಾಂಕ 21 ರಿಂದ 25 ರವರೆಗೆ ರಾಜ್ಯ ಮಟ್ಟದ ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿ ಮತ್ತು ರಾಷ್ಟ್ರ ಮಟ್ಟದ ಕರ್ನಾಟಕ ತಂಡದ ಆಯ್ಕೆ ಪಕ್ರಿಯೆಯನ್ನು ನಗರದ ಗಾಂಧಿ ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ಹರಿಹರ ಕುಸ್ತಿ ಜೀರ್ಣೋದ್ಧಾರ ಸಮಿತಿಯ ಗೌರವ ಅಧ್ಯಕ್ಷ ಎನ್.ಹೆಚ್. ನಂದಿಗಾವಿ ಶ್ರೀನಿವಾಸ್ ಹೇಳಿದರು.



ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ನಾಳೆ ದಿನಾಂಕ 21 ರ ಗುರುವಾರ ಸಂಜೆ 4 ಗಂಟೆಗೆ ಶ್ರೀ ಹರಿಹರೇಶ್ವರ ದೇವಸ್ಥಾನದಿಂದ ಕ್ರೀಡಾ ಜ್ಯೋತಿ ಮೆರವಣಿಗೆ ಮತ್ತು ಕುಸ್ತಿಗೆ ಚಾಲನೆ ನೀಡಲಾಗುತ್ತದೆ. ದಿವ್ಯ ಸಾನ್ನಿಧ್ಯವನ್ನು ಕಾಗಿನಲೆ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ ವಹಿಸಲಿದ್ದಾರೆ. ಕ್ರೀಡಾ ಜ್ಯೋತಿಯ ಚಾಲನೆಯನ್ನು ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕರಾದ ಎಸ್.ರಾಮಪ್ಪ, ಹೆಚ್.ಎಸ್. ಶಿವಶಂಕರ್, ಎಂ.ಹೆಚ್.ಬಿ. ಚಂದ್ರಣ್ಣ, ಪೈ. ಜಡಿಯಪ್ಪ, ಸುರೇಶ್ ಚಂದಾಪೂರ್, ಇದಾಯತ್ ಪತುಲಿ ಮಾಡಲಿದ್ದಾರೆ.

ದಿನಾಂಕ 24 ರಂದು ಸಂಜೆ 5 ಗಂಟೆಗೆ ಎಲ್ಲಾ ವಿಭಾಗಗಳ ಅಂತಿಮ ಕುಸ್ತಿ ಪಂದ್ಯಗಳು ನಡೆಯಲಿದ್ದು, ದಿವ್ಯ ಸಾನ್ನಿಧ್ಯವನ್ನು ಕಾಗಿನಲೆ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ ವಹಿಸಲಿದ್ದಾರೆ. ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದಪುರಿ ಮಹಾಸ್ವಾಮೀಜಿ, ಪಂಚಮಸಾಲಿ ಗುರುಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿ, ರಡ್ಡಿ ಗುರುಪೀಠದ ಜಗದ್ಗುರು ಶ್ರೀ ವೇಮನಾನಂದಪುರಿ ಮಹಾಸ್ವಾಮೀಜಿ, ನಂದಿಗುಡಿ ಶ್ರೀ ಸೋಮಶೇಖರ್ ಶಿವಾಚಾರ್ಯ ಸ್ವಾಮೀಜಿ, ಮುಸ್ಲಿಂ ಸಮುದಾಯದ ಧರ್ಮಗುರುಗಳಾದ ಮೌಲಾನಾ ಖಾಜಿ ಸೈಯದ್ ಷಂಶುದ್ದೀನ್ ಸಾಹೇಬ್, ಕ್ರೈಸ್ತ ಧರ್ಮಗುರುಗಳಾದ ಫಾದರ್ ಜಾರ್ಜ್ ಉಪಸ್ಥಿತರಿರುತ್ತಾರೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ರಾಜ್ಯ ಕುಸ್ತಿ ಸಂಘದ ಅಧ್ಯಕ್ಷ ಬಿ. ಗುಣರಂಜನ್ ಶೆಟ್ಟಿ ವಹಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಜಿಲ್ಲಾಧಿಕಾರಿ ಡಾ. ವೆಂಕಟೇಶ್, ಎಸ್ಪಿ ಉಮಾ ಪ್ರಶಾಂತ್, ದಾವಣಗೆರೆ ಯುವ ಸಬಲೀಕರಣ ಸಹಾಯಕ ನಿರ್ದೇಶಕಿ ಜಯಲಕ್ಷ್ಮಿ ಬಾಯಿ, ರಾಜ್ಯ ಕುಸ್ತಿ ಸಂಘದ ಕಾರ್ಯದರ್ಶಿ ಜೆ. ಶ್ರೀನಿವಾಸ್, ಖಜಾಂಚಿ ಶ್ರೀನಿವಾಸ್ ಅಂಗರಕೋಡಿ, ಉಪಾಧ್ಯಕ್ಷ ಪ್ರಸಾದ್ ಶೆಟ್ಟಿ ಇತರರು ಭಾಗವಹಿಸಲಿದ್ದಾರೆ.

ಕುಸ್ತಿ ತರಬೇತುದಾರ ವಿನೋದ್ ಕುಮಾರ್ ಮಾತನಾಡಿದರು. ಈ ಸಂದರ್ಭದಲ್ಲಿ ಕುಸ್ತಿ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ರೇವಣಪ್ಪ ಧ್ಯಾನನಾಯ್ಕರ್, ಕಾರ್ಯದರ್ಶಿ ಜಗದೀಶ್ ಚೂರಿ, ಖಜಾಂಚಿ ಅಣ್ಣಪ್ಪ ಶಾವಿ, ಸಂಘಟನಾ ಕಾರ್ಯದರ್ಶಿಗಳಾದ ಪಾಲಾಕ್ಷಪ್ಪ, ಶಿವಾನಂದ ವೈ, ಮಾರುತಿ, ವಿಜಯಕುಮಾರ್ ರಟ್ಟೆಹಳ್ಳಿ, ಬೀರೇಶ್, ಶಿವು, ನಾರಾಯಣ, ತಿಪ್ಪೇಸ್ವಾಮಿ ಇತರರು ಹಾಜರಿದ್ದರು.

# ರಾಜಕೀಯ ಚರ್ಚಾ ಕೇಂದ್ರವಾದ ಉಪ ರಾಷ್ಟ್ರಪತಿ ಅಣಕ

## ಸಂಸದರ ವರ್ತನೆಗೆ ರಾಷ್ಟ್ರಪತಿ ಆಕ್ಷೇಪ

ನವದೆಹಲಿ, ಡಿ. 20 – ತೃಣಮೂಲ ಕಾಂಗ್ರೆಸ್ ಸಂಸದ ಕಲ್ಯಾಣ್ ಬ್ಯಾನರ್ಜಿ ಅವರು ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅಣಕ ಮಾಡಿರುವುದು ಈಗ ರಾಜಕೀಯವಾಗಿ ಕೇಂದ್ರ ಸ್ಥಾನ ಪಡೆದುಕೊಂಡಿದೆ. ಸದನದ ಒಳಗೆ ಹಾಗೂ ಹೊರಗೆ ಈ ವಿಷಯ ಪ್ರಮುಖವಾಗಿ ಪ್ರಸ್ತಾಪವಾಗುತ್ತಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಣಕವಾಡಿರುವ ಪ್ರಕರಣದ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ. ಸಂಸತ್ತು ಇಲ್ಲವೇ ಉಪ ರಾಷ್ಟ್ರಪತಿ ಸ್ಥಾನಕ್ಕೆ ಅವಮಾನಿಸುವುದನ್ನು ಸಹಿಸುವುದಿಲ್ಲ ಎಂದು ರಾಜ್ಯಸಭಾಧ್ಯಕ್ಷರೂ ಆಗಿರುವ ಉಪ ರಾಷ್ಟ್ರಪತಿ ಧನಕರ್ ಹೇಳಿದ್ದಾರೆ.

ಸಂಸತ್ತಿನ ಸಂಕೀರ್ಣದಲ್ಲಿ ತಾವು ಅಣಕವಾಡಿದ್ದು ಯಾರಿಗೋ ನೋವು ಕೊಡುವ ಉದ್ದೇಶದಿಂದ ಅಲ್ಲ ಎಂದು ಸಂಸದ ಕಲ್ಯಾಣ್ ಬ್ಯಾನರ್ಜಿ ಹೇಳಿದ್ದಾರೆ. ಕಲ್ಯಾಣ್ ಬೆಂಬಲಿಸಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 140ಕ್ಕೂ ಹೆಚ್ಚು ಸಂಸದರನ್ನು ಅಮಾನತ್ತುಗೊಳಿಸಿರುವ ಅಭೂತಪೂರ್ವ ಕ್ರಮದಿಂದ ಜನರ ಗಮನ ಬೇರೆಡೆಗೆ ಸೆಳೆಯಲು ಸರ್ಕಾರ ಹತಾಶ ಪ್ರಯತ್ನ ನಡೆಸುತ್ತಿದೆ ಎಂದು ಆರೋಪಿಸಿದ್ದಾರೆ.

ಕೇಂದ್ರ ಸಚಿವರಾದ ಸೀತಾರಾಮನ್, ಪಿಯೂಶ್ ಗೋಯಲ್ ಹಾಗೂ ನಿತಿನ್ ಗಡ್ಕರಿ ಅವರು ರಾಜ್ಯಭೆಯಲ್ಲಿ ಪ್ರಶ್ನೋತ್ತರ ಕಲಾಪದ ವೇಳೆ ಮಾತನಾಡುವಾಗ ಧನಕರ್ ಅವರನ್ನು ಬೆಂಬಲಿಸಿದರು.

ಅಪರೂಪಕ್ಕೆ ರಾಜಕೀಯ ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿರುವ ರಾಷ್ಟ್ರಪತಿ ಮುರ್ಮು, ಉಪ ರಾಷ್ಟ್ರಪತಿಯವರನ್ನು ಸಂಸತ್ ಸಂಕೀರ್ಣದಲ್ಲಿ ಅವಮಾನಿಸಿರುವ ರೀತಿಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಚುನಾಯಿತ ಪ್ರತಿನಿಧಿಗಳು ಅಭಿವ್ಯಕ್ತಿ ಸ್ವಾತಂತ್ರ್ಯ ಹೊಂದಿದ್ದಾರೆ. ಆದರೆ, ಅವರ ಅಭಿವ್ಯಕ್ತಿ ಘನತೆ ಹಾಗೂ ಸೌಜನ್ಯದ ವ್ಯಾಪ್ತಿಯಲ್ಲಿರಬೇಕು. ಇದು ನಮ್ಮ ಸಂಸದೀಯ ಸಂಪ್ರದಾಯವಾಗಿದೆ, ಈ ಬಗ್ಗೆ ನಮಗೆ ಹೆಮ್ಮೆ ಇದೆ. ಈ ಸಂಪ್ರದಾಯ ಎತ್ತಿ ಹಿಡಿಯಬೇಕೆಂಬ ನಿರೀಕ್ಷೆ ಜನರದ್ದಾಗಿದೆ ಎಂದು ಮುರ್ಮು ಹೇಳಿದ್ದಾರೆ.

ಮುರ್ಮು ಅವರಿಗೆ ಧನ್ಯವಾದ ಸಲ್ಲಿಸಿರುವ ಧನಕರ್, ಸಂವಿಧಾನಿಕ ಪದ್ಧತಿಗಳನ್ನು ಎತ್ತಿ ಹಿಡಿಯಲು ಕೊನೆ ಕ್ಷಣದವರೆಗೂ ಬದ್ಧವಾಗಿರುತ್ತೇನೆ ಎಂದಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಧನಕರ್‌ಗೆ ದೂರವಾಣಿ ಕರೆ ಮಾಡಿ ಮಾತನಾಡಿ, ಕೆಲ ಸಂಸದರ ವರ್ತನೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಳೆದ 20 ವರ್ಷಗಳಿಂದ ಇದೇ ರೀತಿಯ ಅವಮಾನಗಳನ್ನು ಎದುರಿಸುತ್ತಾ ಬಂದಿದ್ದೇನೆ. ಉಪ ರಾಷ್ಟ್ರಪತಿಯ ಸಂವಿಧಾನಿಕ ಹುದ್ದೆಯಲ್ಲಿರುವವರಿಗೂ ಇದು ಆಗುತ್ತಿದೆ. ಅದೂ ಸಹ ಸಂಸತ್ತಿನ ಆವರಣದಲ್ಲಿ ಈ ರೀತಿಯ ಘಟನೆ ನಡೆದಿದೆ ಎಂದು ಪ್ರಧಾನಿ ಮೋದಿ ಬೇಸರ ವ್ಯಕ್ತಪಡಿಸಿದ್ದಾರೆ.

ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರೂ ಧನಕರ್ ಭೇಟಿ ಮಾಡಿ ಈ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಒಬ್ಬ ಸಂಸದ ಅಣಕವಾಡಿದ್ದನ್ನು, ಇನ್ನೊಬ್ಬ ಸಂಸದ ವಿಡಿಯೋ ಚಿತ್ರೀಕರಿಸಿರುವುದು ಆಘಾತಕಾರಿ. ಇದು ಹೊಸ ರಸಾತಳವಾಗಿದೆ ಎಂದು ಓಂ ಬಿರ್ಲಾ ಹೇಳಿದ್ದಾರೆ.

ಆದರೆ, ಅಣಕವಾಡಿದ್ದು ಅಪರಾಧವಲ್ಲ ಎಂದು ಕಲ್ಯಾಣ್ ಬ್ಯಾನರ್ಜಿ ಸಮರ್ಥಿಸಿಕೊಂಡಿದ್ದಾರೆ. ಸಂಸದರ ಅಮಾನತ್ತಿನ ಪ್ರಮುಖ ವಿಷಯದ ದಾರಿ ತಪ್ಪಿಸಲು ಬಿಜೆಪಿ ಪ್ರಯತ್ನ ನಡೆಸಿದೆ ಎಂದವರು ಆರೋಪಿಸಿದ್ದಾರೆ.

# ಹೊಳೆಸಿರಿಗೆರೆ : ರೈತರಿಗೆ ಎಫ್‌ಐಡಿ ಅರಿವು



ಮಲೇಬೆನ್ನೂರು, ಡಿ.20- ಹೊಳೆಸಿರಿಗೆರೆ ಗ್ರಾಮದಲ್ಲಿ ಮಂಗಳವಾರ ಉಪ ತಹಶೀಲ್ದಾರ್ ಆರ್.ರವಿ ಅವರು, ಎಫ್‌ಐಡಿ (ರೈತರಿಗಾಗಿ ಸರ್ಕಾರದ ವತಿಯಿಂದ ನೀಡಲಾಗುವ ವಿಶೇಷ ಗುರುತಿನ ಸಂಖ್ಯೆ) ಮಾಡಿಸದ ರೈತರ ಮನೆಗಳಿಗೆ ತೆರಳಿ ಅಗತ್ಯ ದಾಖಲೆಗಳನ್ನು ಪಡೆದು ಸ್ಥಳದಲ್ಲಿಯೇ ಎಫ್‌ಐಡಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಭರ್ತಿ ಮಾಡಿದರು. ಅಲ್ಲದೇ ಎಫ್‌ಐಡಿ ಬಗ್ಗೆ ರೈತರಲ್ಲಿ ಅರಿವು ಮೂಡಿಸಿದರು.

ಗ್ರಾಮ ಲೆಕ್ಕಾಧಿಕಾರಿ ಶ್ರೀಮತಿ ನವೀನ ಕಟ್ಟೇರ, ಗ್ರಾಮ ಸೇವಕರಾದ ಶ್ರೀಮತಿ ಮಂಜಮ್ಮ ಈ ವೇಳೆ ಹಾಜರಿದ್ದರು.

# ಎಲೆಬೇತೂರು ಸರ್ಕಾರಿ ಶಾಲೆಯಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಶಾಖೆ ಉದ್ಘಾಟನೆ

ದಾವಣಗೆರೆ, ಡಿ. 20 - ಎಲೆಬೇತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಭಾರತ ಸೇವಾದಳ ನೇತಾಜಿ ಸುಭಾಷ್ ಚಂದ್ರ ಬೋಸ್ ಶಾಖೆ ಉದ್ಘಾಟನೆ ಮತ್ತು ರಾಷ್ಟ್ರಧ್ವಜ ಬ್ಯಾಂಡ್ ವಾದನ, ಅಭಿನಯ ಗೀತೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶಾಖಾ ಉದ್ಘಾಟನೆಯನ್ನು ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಸುಜಾತ ಸಸಿಗೆ ನೀರು ಉಣಿಸುವ ಮೂಲಕ ನೆರವೇರಿಸಿದರು. ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷ ವಿಜಯ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಭಾರತ ಸೇವಾದಳ ದಾವಣಗೆರೆ ಜಿಲ್ಲೆಯ ನೂತನ ಸಂಘಟಕರಾದ ಫಕ್ಕೀರಗೌಡ ಹಳೇಮನಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ರಾಷ್ಟ್ರಧ್ವಜ ಬ್ಯಾಂಡ್ ವಾದನ, ಅಭಿನಯ ಗೀತೆ ತರಬೇತಿ, ಸಾರೇ ಜಹಾಂಸೆ ಅಚ್ಛಾ ಮುಂತಾದ ಸಾಧನೆ ಗೀತೆಗಳನ್ನು ಹೇಳಿಕೊಡುವುದರ ಜೊತೆಗೆ ಅನೇಕ ಡಂಬಲ್ಸ್ ಮುಂತಾದ ಪರಿಕರಗಳನ್ನು ಬಳಸಿ, ನಿಂತು ಮತ್ತು ಕುಳಿತು ಮಾಡುವ ವ್ಯಾಯಾಮಗಳನ್ನು ಮಕ್ಕಳಿಗೆ ಕಲಿಸಿದರು. ಪ್ರತಿ ಶಾಲಾ ಶಾಖೆಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಮಾಡಿರುತ್ತಿದ್ದರೆ ಮಕ್ಕಳಿಗೆ ಸೇವಾದಳದ ಬಗ್ಗೆ ಇನ್ನೂ ಹೆಚ್ಚಿನ ಗೌರವ ಸಿಗುತ್ತಿತ್ತು ಎಂದರು.

ಎಲ್ಲಾ ವಿದ್ಯಾರ್ಥಿಗಳು ತುಂಬಾ ಶಿಸ್ತಿನಿಂದ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಎಸ್.ಡಿ.ಎಂ.ಸಿ., ಶಿಕ್ಷಕರು ಮತ್ತು ಅತಿಥಿಗಳ ಮೆಚ್ಚುಗೆ ಪಡೆದರು.

ಭಾರತ ಸೇವಾದಳ ತಾಲ್ಲೂಕು ಅಧಿನಾಯಕ ಶಿಕ್ಷಕ ಎ.ಆರ್. ಗೋಪಾಲಪ್ಪ ಸ್ವಾಗತಿಸಿದರು. ಓ.ಎಂ. ಗಣೇಶಯ್ಯ ವಂದನೆ ಅರ್ಪಿಸಿದರು. ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ. ಸದಸ್ಯರಾದ ಶ್ರೀಮತಿ ಯಶೋಧ, ರೇಷ್ಮಾಬಾನು, ನಾಗರಾಜ್, ಗಂಗಾಧರ್ ಮತ್ತು ಸಹ ಶಿಕ್ಷಕಿಯರಾದ ಶ್ರೀಮತಿ ಸುಮಿತ್ರಮ್ಮ, ಶಿಲ್ಪ, ಕವಿತ, ಮತ್ತು ವಸಂತಮ್ಮ ಇತರರು ಹಾಜರಿದ್ದರು.

# ಕುಸ್ತಿ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆ



ಮಲೇಬೆನ್ನೂರು, ಡಿ.20- ಹರಿಹರದ ಗಾಂಧಿ ಮೈದಾನದಲ್ಲಿ ನಾಳೆ ದಿನಾಂಕ 21 ರಿಂದ 24 ರವರೆಗೆ ಕರ್ನಾಟಕ ಕುಸ್ತಿ ಸಂಘ ಮತ್ತು ದಾವಣಗೆರೆ ಕುಸ್ತಿ ಸಂಘ ಹಾಗೂ ಶ್ರೀ ಹರಿಹರ ಕುಸ್ತಿ ಜೀರ್ಣೋದ್ಧಾರ ಸಮಿತಿ ವತಿಯಿಂದ ಹಮ್ಮಿಕೊಂಡಿರುವ 3ನೇ ವರ್ಷ ರಾಜ್ಯ ಮಟ್ಟದ ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿಯ ಪೋಸ್ಟರ್‌ಗಳನ್ನು ನಿನ್ನೆ ಸಂಜೆ ಬೆಳ್ಳೂಡಿ ಮಠದಲ್ಲಿ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಬಿಡುಗಡೆ ಮಾಡಿದರು.

ಕುಸ್ತಿ ಪಂದ್ಯಾವಳಿಯ ಆಯೋಜಕ ನಂದಿಗಾವಿ ಶ್ರೀನಿವಾಸ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪೈಲ್ವಾನ್ ದ್ಯಾವನಾಯ್ಕರ್, ಎಸ್.ಜಿ.ಪರಮೇಶ್ವರಪ್ಪ, ಕೊಳೇನಹಳ್ಳಿ ಸತೀಶ್, ಕರೇಕಟ್ಟೆ ಲೋಕೇಶ್, ಕೆ.ಪಿ.ಗಂಗಾಧರ್, ಪಿ.ಹೆಚ್. ಶಿವಕುಮಾರ್, ಡಿ.ಕೆ.ಸಿದ್ದನಗೌಡ, ಎಳೆಹೊಳೆ ಕುಮಾರ್, ಮಲ್ಲಿಕಾರ್ಜುನ್ ಪೂಜಾರ್, ಎಸ್.ಎಂ. ಮಂಜುನಾಥ್, ರಾಜನಹಳ್ಳಿ ಲಂಕೈಪ್ಪ, ಪತ್ರಕರ್ತ ಜಿಗಳಿ ಪ್ರಕಾಶ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

# ಸಂಸತ್ ಭದ್ರತೆ ಉಲ್ಲಂಘನೆ : ಸಾಯಿಕೃಷ್ಣ ವಶಕ್ಕೆ

ಬಾಗಲಕೋಟೆ, ಡಿ. 20 – ಸಂಸತ್ತಿನ ಭದ್ರತೆ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಗಲಕೋಟೆಯ ಸಾಯಿಕೃಷ್ಣ ಎಂಬ ವ್ಯಕ್ತಿಯನ್ನು ದೆಹಲಿ ಪೊಲೀಸರು ಬುಧವಾರ ರಾತ್ರಿ ವಶಕ್ಕೆ ತೆಗೆದುಕೊಂಡಿದ್ದಾರೆ.

ಲೋಕಸಭೆ ಕಲಾಪದ ವೇಳೆ ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದಿದ್ದ ಆರೋಪಿ ಡಿ. ಮನೋರಂಜನ್ ಡೈರಿಯಲ್ಲಿ ಸಾಯಿಕೃಷ್ಣ ಹೆಸರಿತ್ತು.

ನಿವೃತ್ತ ಡಿವೈಎಸ್‌ಪಿ ವಿಠ್ಠಲ ಜಗಲಿ ಎಂಬುವವರ ಪುತ್ರನಾಗಿರುವ ಸಾಯಿಕೃಷ್ಣ, ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಬೆಂಗಳೂರಿನ ಬಿಇಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಾಯಿಕೃಷ್ಣ ಹಾಗೂ ಮನೋರಂಜನ್ ಸಹಪಾಠಿಗಳಾಗಿದ್ದರು.

# ಸಹಾರಾ ಹೂಡಿಕೆ ಮರಳಿಸಲು ಸುಪ್ರೀಂನಲ್ಲಿ ಅರ್ಜಿ

ನವದೆಹಲಿ, ಡಿ. 20 – ಸಹಾರಾ ಸಮೂಹದ ಹೂಡಿಕೆದಾರರಿಗೆ ಹಣ ಮರಳಿಸಲು ಅವಕಾಶ ನೀಡುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಕೇಂದ್ರ ಸರ್ಕಾರ ಮತ್ತೆ ಅರ್ಜಿ ಸಲ್ಲಿಸಲಿದೆ.

ಸಹಾರಾ ಸಮೂಹಕ್ಕೆ ಸೇರಿದ ಮೂರು ಸಹಕಾರಿ ಸಂಸ್ಥೆಗಳಲ್ಲಿ ಹೂಡಿಕೆದಾರರ 80 ಸಾವಿರ ಕೋಟಿ ರೂ.ಗಳು ಸಿಲುಕಿವೆ.

ಈ ಸೊಸೈಟಿಗಳಲ್ಲಿರುವ ತಮ್ಮ ಹಣ ವಾಪಸ್ ಪಡೆಯಲು ಕೇಂದ್ರ ಸಹಕಾರ ಸಚಿವಾಲಯವು ವೆಬ್‌ಸೈಟ್ ಒಂದನ್ನು ಆರಂಭಿಸಿದೆ ಎಂದು ಸಹಕಾರ ಖಾತೆ ರಾಜ್ಯ ಸಚಿವ ಬಿ.ಎಲ್. ವರ್ಮ ರಾಜ್ಯಸಭೆಗೆ ತಿಳಿಸಿದ್ದಾರೆ.

ಈ ಮೂರೂ ಸಂಸ್ಥೆಗಳಲ್ಲಿ ತಾವು 80 ಸಾವಿರ ಕೋಟಿ ರೂ. ಹೂಡಿಕೆ ಮಾಡಿರುವುದಾಗಿ ಮೂರು ಕೋಟಿ ಹೂಡಿಕೆದಾರರು ವೆಬ್‌ಸೈಟ್‌ನಲ್ಲಿ ವಿವರ ದಾಖಲಿಸಿದ್ದಾರೆ.

45 ದಿನಗಳ ಹಿಂದೆಯೇ ನಾವು ಹಣ ಮರಳಿಸುವುದನ್ನು ಆರಂಭಿಸಿದ್ದೇವೆ ಎಂದು ಸಚಿವರು ಹೇಳಿದರು.

ನಮಗೆ 5 ಸಾವಿರ ಕೋಟಿ ರೂ.ಗಳು ದೊರೆತಿವೆ. ಹೂಡಿಕೆದಾರರಿಗೆ ಮರಳಿಸಲು ಸಹಾರಾ ಸಮೂಹದಿಂದ ಇನ್ನಷ್ಟು ಹಣ ಬಿಡುಗಡೆ ಮಾಡುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುತ್ತೇವೆ ಎಂದವರು ಹೇಳಿದ್ದಾರೆ.

# ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಕ್ಕೆ ಪಂಪಾಪತಿ ಹೆಸರಿಡಲು ಸಚಿವ, ಶಾಸಕರಿಗೆ ಮನವಿ

ದಾವಣಗೆರೆ, ಡಿ. 20 - ನಗರದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಕ್ಕೆ ಶ್ರಮಜೀವಿ ಕಾಂ. ಪಂಪಾಪತಿ ನಿಲ್ದಾಣವೆಂದು ನಾಮಕರಣ ಮಾಡುವ ಮೂಲಕ ಅವರ ಕಂಚಿನ ಪ್ರತಿಮೆ ನಿರ್ಮಾಣ ಮಾಡಬೇಕೆಂದು ಒತ್ತಾಯಿಸಿ ಎಐಟಿಯುಸಿ ಜಿಲ್ಲಾ ಸಮಿತಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರಿಗೆ ಮನವಿ ನೀಡಿ ಆಗ್ರಹಿಸಿದರು.





ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕ ಶಾಮನೂರು ಶಿವಶಂಕರಪ್ಪ ಅವರ ನಿವಾಸಕ್ಕೆ ನಿನ್ನೆ ತೆರಳಿದ್ದ ಎಐಟಿಯುಸಿ ನಿಯೋಗವು, ಪಂಪಾಪತಿ ಅವರು ತಮ್ಮ ಜೀವಿತಾವಧಿಯಲ್ಲಿ ಶ್ರಮಿಕರ ಅಳಲನ್ನು ನಿವಾರಣೆ ಮಾಡುತ್ತಾ ತಾವು ವಾಸ ಮಾಡಲಿಕ್ಕೆ ಸರಿಯಾದ ಸೂರನ್ನೂ ನಿರ್ಮಿಸಿಕೊಳ್ಳದೇ ಜೀವನ ನಡೆಸಿದ ಧೀಮಂತ ನಾಯಕ. ಅಲ್ಲದೇ ಕೆಎಸ್ಸಾರ್ಟಿಸಿ ಬಸ್‌ನಿಲ್ದಾಣಕ್ಕೆ ಕಾರಣರು. ಈ ನಿಟ್ಟಿನಲ್ಲಿ ನಗರದಲ್ಲಿ ನಿರ್ಮಾಣ ಆಗುತ್ತಿರುವ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಕ್ಕೆ ಅವರ ಹೆಸರನ್ನಿಟ್ಟು, ಕಂಚಿನ ಪ್ರತಿಮೆ ನಿರ್ಮಾಣ ಮಾಡಬೇಕೆಂದು ಆಗ್ರಹಿಸಿದರು.

ಇದಲ್ಲದೇ, ನಗರದಲ್ಲಿರುವ ಆಶ್ರಯ ನಿರಾಶ್ರಿತರನ್ನು ಗುರುತಿಸಿ ಸರ್ಕಾರ ಮತ್ತು ಜಿಲ್ಲಾಡಳಿತ ಅವರಿಗೆ ಹಕ್ಕುಪತ್ರ ನೀಡಿ, ಮೂಲಭೂತ ಸೌಲಭ್ಯಗಳೊಂದಿಗೆ ಮನೆಗಳನ್ನು ನಿರ್ಮಾಣ ಮಾಡಿಕೊಡಬೇಕು. ನಗರವು ದಿನದಿಂದ ದಿನಕ್ಕೆ ವೇಗವಾಗಿ ಬೆಳೆಯುತ್ತಿದ್ದು, ಜನಸಂಖ್ಯೆಗೆ ಅನುಗುಣವಾಗಿ ನಿರಾಶ್ರಿತರಿಗೆ ಮನೆಗಳ ನಿರ್ಮಾಣ ಮಾಡಬೇಕು ಎಂದರು.

ಆವರಗೆರೆಯ ಗೋಮಾಳ ಸರ್ವೆ ನಂ.213 ಚಾಲ್ತಿ ಖಾತೆ ಸರ್ವೆ ನಂ.393ರಲ್ಲಿ ಸುಮಾರು 100 ಎಕರೆಗೂ ಅಧಿಕ ಜಮೀನು ಒತ್ತುವರಿಯಾಗಿದೆ. ತೋಳಹುಣಸೆ ಸರ್ವೆ ನಂ.62 ರಿಂದ 75ರವರೆಗೂ 133 ಎಕರೆ ಜಮೀನು ಇದ್ದು ಜನರು ವಾಸ ಮಾಡಲು ಯೋಗ್ಯ ಪ್ರದೇಶವಾಗಿದೆ.

ಅಲ್ಲದೇ, ದಾವಣಗೆರೆ ನಗರದಿಂದ 10-15 ಕಿ.ಮೀ.ವ್ಯಾಪ್ತಿಯಲ್ಲಿ 150 ರಿಂದ 200 ಎಕರೆ ಜಮೀನನ್ನು ರೈತರಿಂದ ನೇರವಾಗಿ ಖರೀದಿ ಮಾಡಬೇಕೆಂದು ಒತ್ತಾಯಿಸಿದರು.

ದಾವಣಗೆರೆ ತಾಲ್ಲೂಕು ಹಾಲುವರ್ತಿ ಮತ್ತು ಕೊಡಗನೂರು ಗ್ರಾಮದ ಸುತ್ತಮುತ್ತಲಿನಲ್ಲಿರುವ ಸೇಂದಿ ವನಗಳು ಹಾಳು ಬಿದ್ದಿದ್ದು ಸಂಬಂಧಿಸಿದಂತೆ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಆಶ್ರಯ ನಿರಾಶ್ರಿತರನ್ನು ಗುರುತಿಸಿ ಮೂಲ ಸೌಕರ್ಯಗಳೊಂದಿಗೆ ಮನೆ ನಿರ್ಮಾಣ ಮಾಡಿಕೊಡಬೇಕೆಂದು ಆಗ್ರಹಿಸಿದರು.

ಈ ವೇಳೆ ಹೆಚ್.ಜಿ. ಉಮೇಶ್, ಆನಂದರಾಜ್, ರಾಘವೇಂದ್ರ ನಾಯರಿ, ವಿ. ಲಕ್ಷ್ಮಣ್, ಮುರುಗೇಶ್, ಆವರಗೆರೆ ಚಂದ್ರು, ವಾಸು, ಎಂ.ಬಿ. ಶಾರದಮ್ಮ, ಮಲ್ಲಮ್ಮ, ಐರಣಿ ಚಂದ್ರು, ಶಿವಕುಮಾರ್ ಡಿ.ಶೆಟ್ಟರ್, ಕನಗನಹಳ್ಳಿ ವೆಂಕಟೇಶ್, ತುಂಬಿಗೆರೆ ನಾಗಣ್ಣ, ಎ. ತಿಪ್ಪೇಶ್ ಆವರಗೆರೆ, ಹೆಚ್‌ಕೆಆರ್ ಸುರೇಶ್, ಮುದಹದಡಿ ಸುರೇಶ್, ನರೇಗಾ ರಂಗನಾಥ್, ಮೌನೇಶ್ ಇತರರು ಇದ್ದರು.

# ಲೋಕಸಭೆಯಿಂದ ಇನ್ನಿಬ್ಬರು ಅಮಾನತ್ತು

ನವದೆಹಲಿ, ಡಿ. 20 – ಲೋಕಸಭೆಯಿಂದ ಪ್ರತಿಪಕ್ಷದ ಇನ್ನಿಬ್ಬರು ಸಂಸದರನ್ನು ಅಮಾನತ್ತುಗೊಳಿಸಲಾಗಿದೆ. ಲೋಕಸಭೆಯಲ್ಲಿ ಭಿತ್ತಿಪತ್ರಗಳನ್ನು ಪ್ರದರ್ಶಿಸಿದ ನಂತರ ಈ ಕ್ರಮ ತೆಗೆದುಕೊಳ್ಳಲಾಗಿದೆ. ಕೇರಳ ಕಾಂಗ್ರೆಸ್ (ಎಂ) ಪಕ್ಷದ ಥಾಮಸ್ ಚಜಿಕಾಡನ್ ಹಾಗೂ ಸಿಪಿಐ (ಎಂ) ಸದಸ್ಯ ಎ.ಎಂ. ಆರಿಫ್‌ಅವರನ್ನುಅಮಾನತ್ತುಗೊಳಿಸಲಾಗಿದೆ. ಇದರಿಂದಾಗಿ ಲೋಕಸಭೆ ಯಿಂದ ಅಮಾನತ್ತುಗೊಂಡ ಸಂಸದರ ಸಂಖ್ಯೆ 97ಕ್ಕೆ ಏರಿಕೆಯಾಗಿದೆ. ಇದುವರೆಗೂ ಸಂಸತ್ತಿನ ಉಭಯ ಸದನಗಳಿಂದ ಒಟ್ಟು 143 ಸದಸ್ಯರನ್ನು ಅಮಾನತ್ತುಗೊಳಿಸಿದಂತಾಗಿದೆ.


**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ 40x50 South, 30x28 North, 30x40 South, 50x45 South, 40x55 North, 35x48 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮಾರಾಟಕ್ಕಿವೆ**
ದಾವಣಗೆರೆ ನಗರದ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿ ಚಾಲ್ತಿಯಲ್ಲಿರುವ ಕೆಫೆ ಮತ್ತು ಹೋಟೆಲ್ (1000 Sq. ft) ಮಾರಾಟಕ್ಕಿದೆ. ಸಂಪರ್ಕಿಸಿ :
63612 97004

**ಬೇಕಾಗಿದ್ದಾರೆ**
ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ವೆಂಡರ್ ಮತ್ತು ಸಪ್ಲೈಯರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ :
98442 99666, 98441 99966

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಜಮೀನು ಮಾರಾಟಕ್ಕಿದೆ**
12 ಎಕರೆ ನೀರಾವರಿ ಸೌಲಭ್ಯವಿರುವ ಸ್ವಂತ ಜಮೀನು ಮಾರಾಟಕ್ಕಿದೆ.
95900 88767
81056 70240

**ಸೈಟುಗಳು ಮಾರಾಟಕ್ಕಿವೆ**
ಅಥಣಿ ಕಾಲೇಜು ಹತ್ತಿರ, MBA ಕಾಲೇಜು ರೋಡಿನಲ್ಲಿ 30x43 North, ಸೆಮಿ ಕಮರ್ಷಿಯಲ್ ಸೈಟ್ ಹೊಸಬನಶಂಕರಿ ಲೇಔಟ್‌ನಲ್ಲಿ 30x40, 30x40 West, 40 ಅಡಿ ರೋಡ್‌ಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WANTED**
Tele caller and massage therapist and beautician
Training also free
63606 45730

**ನೂತನ ಶುಭಾರಂಭ**
ಹಂಸಧ್ವನಿ ಮ್ಯೂಸಿಕಲ್ಸ್
ದಾವಣಗೆರೆ ನಗರದ ಮಧ್ಯಭಾಗದಲ್ಲಿ (ಲಾಯರ್ಸ್ ರಸ್ತೆಯಲ್ಲಿ) ಕರೋಕೆ ಸಿಂಗಿಂಗ್ ಸ್ಟುಡಿಯೋ ಆರಂಭಗೊಂಡಿದೆ. ಉದಯೋನ್ಮುಖ/ಹವ್ಯಾಸೀ/ವೃತ್ತಿನಿರತ ಕಲಾವಿದರಿಗಾಗಿ, (ಪ್ರತಿದಿನ ಬೆ.10 ರಿಂದ ರಾತ್ರಿ10ರವರೆಗೆ ತೆರೆದಿರುತ್ತದೆ)
ಫೋ. : 96113 81616

**ಮನೆಗಳು ಮಾರಾಟ ಇವೆ**
MCC 'B' ಮನೆ ಪೂರ್ವ 44x60, MCC 'A' ಸೈಟ್ ಪೂರ್ವ 44x60, ಆಂಜನೇಯ ಬಡಾವಣೆ 35x47, ಮಹಾಲಕ್ಷ್ಮಿ ಹೊಸ ಮನೆಗಳು ಇವೆ, ಇನ್ವೆಸ್ಟ್‌ಮೆಂಟ್ ಸೈಟ್ ಇವೆ.
ಏಜೆಂಟರು ಎಸ್.ಯಲ್ಲೋಜಿರಾವ್
97418 11694

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿರುತ್ತಾರೆ, ವಯಸ್ಸು 18-35, ಆಕರ್ಷಕ ಸಂಬಳ ಕೊಡಲಾಗುವುದು. ವಿಳಾಸ : ವಿಜಯಲಕ್ಷ್ಮಿ ರಸ್ತೆ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ. ಸಂಪರ್ಕಿಸಿ :
80951 23153

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಬೇಕಾಗಿದ್ದಾರೆ**
ಹರಿಹರ MRP ಲಿಕ್ಕರ್ ಅಂಗಡಿಯಲ್ಲಿ ಕೆಲಸ ಮಾಡಲು ಬಿಲ್ಲಿಂಗ್ ಕಂಪ್ಯೂಟರ್ ಆಪರೇಟರ್ ಹಾಗೂ ವೆಂಡರ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಕೊಡಲಾಗುವುದು.
99726 98591, 94490 37488

**ಸೈಟು ಮಾರಾಟಕ್ಕಿದೆ**
ಕರ್ನಾಟಕ ಹೌಸಿಂಗ್ ಬೋರ್ಡ್ ( KHB) 40 ಅಡಿ ರಸ್ತೆಗೆ ( 40x60 ಪೂರ್ವ) 2 ) ತರಳಬಾಳು ಬಡಾವಣೆ 50x39 (ಪಶ್ಚಿಮ) 3) ಡಾಲರ್ಸ್ ಕಾಲೋನಿ 35x50 (ದಕ್ಷಿಣ) 4) ಶಿವ-ಪಾರ್ವತಿ 30x40 (ಪಶ್ಚಿಮ) (40 ಅಡಿ ರಸ್ತೆ)
95385 65909

**2 BHK ಮನೆ ಬಾಡಿಗೆಗಿದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ರೈತರ ಬೀದಿ, ದಾವಣಗೆರೆ-2.
97405 69252

**ಮನೆ ಬಾಡಿಗೆಗೆ**
ಚೌಕಿಪೇಟೆಯಲ್ಲಿ ಬೇವಿನ ಮರದ ಹತ್ತಿರ, 2 BHK, 1ನೇ ಮಹಡಿಯಲ್ಲಿ 2 ಮನೆ ಬಾಡಿಗೆಗೆ ಇವೆ.
94484 05913
94488 45062

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18-35 ವರ್ಷದೊಳಗಿನ ಹುಡುಗರು, ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ. ಆಮಂತ್ರಣ
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
97400 01117

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಸೂಪರ್‌ವೈಜರ್ ರಾತ್ರಿಪಾಳೆ
ಸೆಕ್ಯೂರಿಟಿ ಗಾರ್ಡ್ ರಾತ್ರಿ ಪಾಳೆ
ಎಸ್.ಟಿ. ಸೋಮಶೇಖರ್
98803 37686

**ಶ್ರೀ ಪಂಚಮುಖಿ ಜ್ಯೋತಿಷ್ಯಾಲಯ**
ಪಂಡಿತ್ ಶ್ರೀ ರಾಮ್ ಭಟ್
ಮಂತ್ರಾಲಯದಿಂದ ನೇರ ಪರಿಹಾರ ನಿಮ್ಮ ಸಮಸ್ಯೆಗಳಾದ ವ್ಯಾಪಾರದಲ್ಲಿ ಲಾಭ-ನಷ್ಟ, ವಿದ್ಯೆ, ಉದ್ಯೋಗ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿ ಮೋಸ, ಇನ್ನೊಬ್ಬರ ಹತ್ತಿರ ಹೇಳಲಾಗದ ಸಮಸ್ಯೆಗಳಿಗೆ ದೂರವಾಣಿ ಮೂಲಕ ತಿಳಿಸಬಹುದು. ನಿಮ್ಮೆಲ್ಲಾ ಸಮಸ್ಯೆಗಳನ್ನು ಗುಪ್ತವಾಗಿಡಲಾಗುವುದು. ಇಂದೇ ಕರೆ ಮಾಡಿ. ವಶೀಕರಣ ಸ್ಪೆಷಲಿಸ್ಟ್.
ಮೊ : 99807 70791

**COMMERCIAL COMPLEX FOR RENT**
Ground Floor - 600 Sq.ft
First Floor 1700 Sq.ft
Second Floor 1700 Sq.ft
with lift facility in chetan Hotel Road, Davanagere.
79752 35107

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ಕಾಶಿ ಪ್ರವಾಸ 09.02.2024 ರಿಂದ 19.02.2024ರವರೆಗೆ
ಕಾಶಿ, ಅಯೋಧ್ಯೆ, ಪ್ರಯಾಗರಾಜ್, ಆಗ್ರಾ, ಮಥುರಾ, ದೆಹಲಿ. ಕಾಶಿ ಪ್ರವಾಸಕ್ಕೆ ಕೇವಲ 20 ಸೀಟುಗಳು ಇವೆ. ಆಸಕ್ತಿಯುಳ್ಳವರು ವಿಚಾರಿಸಿ :
94485 33928, 90086 26473


**ಮಾರಾಟಕ್ಕಿದೆ**
ಮಿಟ್ಲಕಟ್ಟೆಯಲ್ಲಿ 19 ಗುಂಟೆ ಗೋಡೌನ್ ಸಹಿತ ಜಾಗ ಮಾರಾಟಕ್ಕಿದೆ, ದಾವಣಗೆರೆ. ಮಲೇಬೆನ್ನೂರು ರೋಡ್.
91641 29236

**ಬೇಕಾಗಿದ್ದಾರೆ**
ಸೆಲ್ಫ್ ಸರ್ವೀಸ್ ಹೋಟೆಲ್‌ನಲ್ಲಿ ಕೌಂಟರ್ ಸಪ್ಲೈಯರ್ ಕೆಲಸಕ್ಕೆ ನುರಿತ ಯುವಕರು ಬೇಕಾಗಿದ್ದಾರೆ.
ಕೆಲಸದ ಸಮಯ : 12pm-10pm
95388 96927

**ಪರ್ಸನಲ್ ಲೋನ್**
13 ಸಾವಿರಕ್ಕಿಂತ ಹೆಚ್ಚಿನ ಸಂಬಳ ಬರುತ್ತಿದ್ದರೆ ಲೋನ್ ಕೊಡಲಾಗುತ್ತದೆ. ಹೋಮ್ ಲೋನ್, ಮನೆ ಖರೀದಿ, ಸೈಟ್ ಖರೀದಿ, ಎಲ್ಲಾ ತರಹದ ಸಾಲ ಸೌಲಭ್ಯಕ್ಕೆ ಸಂಪರ್ಕಿಸಿ.
74835 24662

**HOUSE FOR RENT**
Ground floor, 2BHK Fully furnished, East facing with solar is available for rent at 4th main, 6th cross, J. C. Extension, Harihar.
80501 63846

**ಮನೆ ಬಾಡಿಗೆಗೆ ಇದೆ**
ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್, 1ನೇ ಮೇನ್, 9ನೇ ಕ್ರಾಸ್‌ನಲ್ಲಿ ಬೋರ್‌ವೆಲ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ (Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ
ಎಂ.ಟಿ. ಬಸವರಾಜು ಎಂ.ಎಸ್ಸಿ
ಭೂ ವಿಜ್ಞಾನಿಗಳು
94492 02888, 86608 03384

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಅನುಭವವುಳ್ಳ ತಿಂಡಿ ಮತ್ತು ಅಡುಗೆ ಭಟ್ಟರು ಬೇಕಾಗಿದ್ದಾರೆ.
ಸಂಪರ್ಕಿಸಿ
ಶ್ರೀ ವಿಷ್ಣು ಪ್ರಸಾದ್ ಹೋಟೆಲ್
ಬೇತೂರು ರಸ್ತೆ ದಾವಣಗೆರೆ.
ಮೊ : 94491 28315

**ಡ್ರೈವರ್ಸ್ ಬೇಕಾಗಿದ್ದಾರೆ**
ಸ್ಮಾರ್ಟ್ ಸಿಟಿ ಕ್ಯಾಬ್ಸ್ ದಾವಣಗೆರೆ ಕ್ಯಾಬ್ ಡ್ರೈವರ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ :
81233 02057

**HSRB GLOBAL FOUNDATION (R)**
Job vacancy 3 (male) candidate Qualification:MBA (Marketing) or field experience. Interview date 22.12.2023 friday Timming:11 to 3 PM #650/2 Pisale Complex, PJ extension, 8th main, Davanagere-2.
76194 56109

**ಕೆಲಸಕ್ಕೆ ಬೇಕಾಗಿದ್ದಾರೆ**
ಎಕ್ಸಿಕ್ಯೂಟಿವ್ ಆಫೀಸರ್ಸ್ ಬ್ಯಾಂಕಿನ ಕೆಲಸಕ್ಕೆ ಹುಡುಗ-ಹುಡುಗಿಯರು ಬೇಕಾಗಿದ್ದಾರೆ.
97385 60365
86603 71199

**ಅಕ್ಷಯ ಗೋಲ್ಡ್ ಲೋನ್**
ಪ್ರತಿ ಗ್ರಾಂಗೆ - 4300
ಆಸಕ್ತರು ಸಂಪರ್ಕಿಸಿ:
63660 65527

# ಅತಿಥಿ ಉಪನ್ಯಾಸಕರ ಪಂಜಿನ ಮೆರವಣಿಗೆ




ದಾವಣಗೆರೆ, ಡಿ.20- ರಾಜ್ಯದಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲು ಆಗ್ರಹಿಸಿ, ಅತಿಥಿ ಉಪನ್ಯಾಸಕರು ನಗರದ ಡಾ. ಎಂ.ಸಿ. ಮೋದಿ ವೃತ್ತದಿಂದ ಪಂಜಿನ ಮೆರವಣಿಗೆ ನಡೆಸಿದರು.

ಜಿಲ್ಲೆಯ ಅತಿಥಿ ಉಪನ್ಯಾಸಕರು ಸರ್ಕಾರದ ಗಮನ ಸೆಳೆಯಲು ಜಿಲ್ಲಾಧಿಕಾರಿ ಕಚೇರಿ ಮುಂಭಾಗ ವಿವಿಧ ರೀತಿಯ ಪ್ರತಿಭಟನೆಗಳನ್ನು ನಡೆಸಿದ್ದು, 27ನೇ ದಿನವಾದ ನಿನ್ನೆ ಹಮ್ಮಿಕೊಂಡಿದ್ದ ಪಂಜಿನ ಮೆರವಣಿಗೆ ಗುಂಡಿ ಸರ್ಕಲ್‌ನಿಂದ ಪ್ರಾರಂಭವಾಗಿ ವಿದ್ಯಾರ್ಥಿ ಭವನ, ಅಂಬೇಡ್ಕರ್ ಸರ್ಕಲ್ ಮೂಲಕ ಸಾಗಿ ಜಯದೇವ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸುವ ಮೂಲಕ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲು ಸರ್ಕಾರಕ್ಕೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಶ್ಯಾಮ್‌ಪ್ರಸಾದ್, ಜಗದೀಶ್ ಎಂ, ಶೋಭಾ ಎಸ್, ಸಿದ್ದೇಶ್ ಬಿ.ಜಿ, ರವೀಂದ್ರ, ಸಂತೋಷ್‌ಕುಮಾರ್, ಡಾ. ಪ್ರವೀಣ್‌ಕುಮಾರ್, ಈಶ್ವರಿ, ಯಶೋಧ, ಡಾ. ಸಂತೋಷ್, ಡಾ. ಧನಂಜಯ್‌ಮೂರ್ತಿ, ಸಂದೀಪ್, ಮಂಜುಳಾ, ಸಮರ್ಥರಾಮ್, ವಾಣಿ, ಮೋಹನ್, ಭಾರತಿ, ಪ್ರತಿಭಾ ಸೇರಿದಂತೆ ಇತರರು ಇದ್ದರು.

# ದೋಸೋತ್ಸವದಲ್ಲಿ ಗ್ರಾಹಕರಿಗೆ ಗುಣಮಟ್ಟದ ಬೆಣ್ಣೆ ದೋಸೆಗಳನ್ನು ನೀಡಲು ಜಿಲ್ಲಾಧಿಕಾರಿ ಸೂಚನೆ



ದಾವಣಗೆರೆ, ಡಿ.20- ಅಂತರ ರಾಷ್ಟ್ರೀಯ ಮಟ್ಟದಲ್ಲಿ ದಾವಣಗೆರೆ ಬೆಣ್ಣೆದೋಸೆಯನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ಇದೇ ದಿನಾಂಕ 23, 24 ಮತ್ತು 25 ರಂದು ದೋಸೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಗ್ರಾಹಕರಿಗೆ ಉತ್ತಮ ಗುಣಮಟ್ಟದ ಬೆಣ್ಣೆದೋಸೆಯನ್ನು ನೀಡಲು ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ಬೆಣ್ಣೆ ದೋಸೆ ಹೋಟೆಲ್ ಮಾಲೀಕರಿಗೆ ಸೂಚಿಸಿದರು.

ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ದೋಸೋತ್ಸವದ ಕುರಿತಂತೆ ಬೆಣ್ಣೆ ದೋಸೆ ಹೋಟೆಲ್ ಮಾಲೀಕರೊಂದಿಗೆ ನಡೆಸಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು

ದಾವಣಗೆರೆ ಬೆಣ್ಣೆದೋಸೆಗೆ ಬ್ರಾಂಡಿಂಗ್ ನೀಡುವ ಉದ್ದೇಶದಿಂದ ದಿನಾಂಕ 23, 24 ಮತ್ತು 25 ರಂದು ನಗರದ ಬಾಪೂಜಿ ಎಂಬಿಎ ಮೈದಾನ ಮತ್ತು ಗ್ಲಾಸ್‌ಹೌಸ್ ಮುಂಭಾಗದಲ್ಲಿ ದೋಸೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 8 ರಿಂದ ದೋಸೋತ್ಸವ ಪ್ರಾರಂಭವಾಗಲಿದ್ದು, ಒಂದು ಬೆಣ್ಣೆ ದೋಸೆಗೆ ರೂ.60/- ಹಾಗೂ 1 ಪ್ಲೇಟ್ ಖಾಲಿ ದೋಸೆಗೆ ರೂ.60/- ಗಳನ್ನು ನಿಗದಿಪಡಿಸಲಾಗಿದೆ. ದೋಸೆ ಅಂಗಡಿ ಮಾಲೀಕರು ಕಾರ್ಯಕ್ರಮದಲ್ಲಿ ಯಾವುದೇ ಒತ್ತಡಕ್ಕೆ ಒಳಗಾಗದೆ ಸುಲಭ ವಿಧಾನ ಅನುಸರಿಸಬೇಕು ಹಾಗೂ ಟೋಕನ್ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಇದೇ ದಿನಾಂಕ 23, 24 ರಂದು ವೀರಶೈವ ಮಹಾಸಭಾ ಅಧಿವೇಶನವಿರುವುದರಿಂದ ಜನಸಂದಣಿ ಹೆಚ್ಚಾಗಿರುವುದರಿಂದ ಗ್ರಾಹಕರಿಗೆ ಅರೆಬರೆ ಬೇಯಿಸಿದ ದೋಸೆಗಳನ್ನು ನೀಡದೇ, ಉತ್ತಮ ಗುಣಮಟ್ಟದ ಬೆಣ್ಣೆದೋಸೆಗಳನ್ನು ನೀಡಬೇಕು. ದೋಸೆ ಸ್ಟಾಲ್‌ಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಕಸದ ಡಬ್ಬಿಗಳ ವ್ಯವಸ್ಥೆ ಹಾಗೂ ಶುಚಿತ್ವವನ್ನು ಕಾಪಾಡಿಕೊಳ್ಳಬೇಕೆಂದರು.

ಹೋಟೆಲ್ ಮಾಲೀಕರು ತ್ಯಾಜ್ಯ ಪದಾರ್ಥಗಳನ್ನು ಆಗಿಂದಾಗ್ಗೆ ವಿಲೇವಾರಿ ಮಾಡಬೇಕು. ದೋಸೆ ತಯಾರಿಕೆಯಲ್ಲಿ ರಾಸಾಯನಿಕಗಳನ್ನು ಬಳಸಬಾರದು. ಸಂಬಂಧಿಸಿದ ಅಧಿಕಾರಿಗಳು ದೋಸೆಯ ಗುಣಮಟ್ಟ, ದೋಸೆಯ ರುಚಿ ತಪಾಸಣೆ, ಸ್ಟಾಲ್‌ಗಳ ವ್ಯವಸ್ಥೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶಿಸಿದರು.

ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಉಪವಿಭಾಗಾಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ಸಿದ್ದರಾಮ ಮಾರಿಹಾಳ್, ದಾವಣಗೆರೆ ತಾಲ್ಲೂಕು ತಹಶೀಲ್ದಾರ್ ಡಾ.ಎಂ.ಬಿ ಅಶ್ವತ್ಥ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್ ಷಣ್ಮುಖಪ್ಪ, ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಹಾಗೂ ಹೋಟೆಲ್ ಮಾಲೀಕರು ಉಪಸ್ಥಿತರಿದ್ದರು.

# ಹೊನ್ನೂರು ಗೊಲ್ಲರಹಟ್ಟಿ ಜನರಿಗೆ ಜ್ವರಬಾಧೆ : ಪರಿಶೀಲಿಸಿದ ಶಾಸಕ ಬಸವಂತಪ್ಪ



ದಾವಣಗೆರೆ, ಡಿ.20- ಶೀತ, ಜ್ವರದಿಂದ ಜನರು ಬಳಲುತ್ತಿದ್ದಾರೆ ಎಂಬ ವಿಷಯ ತಿಳಿದು, ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ತಾಲ್ಲೂಕಿನ ಹೊನ್ನೂರು ಗೊಲ್ಲರಹಟ್ಟಿಗೆ ಬುಧವಾರ ಭೇಟಿ ನೀಡಿ, ಪರಿಶೀಲನೆ ನಡೆಸಿ ಗ್ರಾಮಸ್ಥರ ಸಮಸ್ಯೆಯನ್ನು ಆಲಿಸಿದರು.

ಕೇರಳದಲ್ಲಿ ಕೊರೊನಾ ಉಪತಳಿ ಜೆಎನ್1 ಎಂಬ ಸೋಂಕು ಬಾಧಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಸರ್ಕಾರ ಸೋಂಕು ಹರಡದಂತೆ ಕಟ್ಟುನಿಟ್ಟಿನ ಆದೇಶ ನೀಡಿರುವುದರಿಂದ ಜಿಲ್ಲಾಡಳಿತ ಕೂಡ ಮುನ್ನೆಚ್ಚರಿಕೆ ಕ್ರಮ ವಹಿಸಿದೆ.

ಹೀಗಾಗಿ ಹೊನ್ನೂರು ಗೊಲ್ಲರಹಟ್ಟಿಯಲ್ಲಿ ಕೆಲವು ಜನರು ಜ್ವರದಿಂದ ಬಳಲುತ್ತಿರುವ ವಿಷಯ ತಿಳಿದೊಡನೆ ಶಾಸಕರು ದಿಢೀರ್ ಭೇಟಿ ನೀಡಿ ಗ್ರಾಮಸ್ಥರ ಬಳಿ ಮಾಹಿತಿ ಪಡೆದರು. ಜೊತೆಗೆ ಆರೋಗ್ಯ ಇಲಾಖೆ ಅಧಿಕಾರಿಗಳು ಕೂಡ ಗ್ರಾಮಕ್ಕೆ ದೌಡಾಯಿಸಿ ಜ್ವರದಿಂದ ಬಳಲುತ್ತಿರುವವರನ್ನು ಪರೀಕ್ಷೆಗೊಳ ಪಡಿಸಿದ್ದು, ಮೇಲ್ನೋಟಕ್ಕೆ ಚಿಕನ್‌ಗುನ್ಯಾ ಅಥವಾ ಡೆಂಗ್ಯೂ ಜ್ವರ ಇರಬಹುದೆಂದು ಶಂಕಿಸಲಾಗಿದೆ ಎಂದು ಪಿಡಿಒ ನಾಗರಾಜ್ ಶಾಸಕರಿಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರು ಪೂರೈಕೆ, ಗ್ರಾಮ ಸ್ವಚ್ಛತೆ, ಆಗಿಂದಾಗ್ಗೆ ಸೊಳ್ಳೆಗಳು ಉತ್ಪತ್ತಿಯಾಗದಂತೆ ಫಾಗಿಂಗ್ ಮಾಡಿಸುವಂತೆ ಗ್ರಾಪಂ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜೊತೆಗೆ ಗ್ರಾಮದಲ್ಲಿ ಜ್ವರದಿಂದ ಬಳಲುತ್ತಿರುವ ಜನರಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಗ್ರಾಪಂ ಪಿಡಿಒ ನಾಗರಾಜ್, ಗ್ರಾಪಂ ಸದಸ್ಯ ನಾಗರಾಜ್, ಮಾಯಕೊಂಡ ಯುವ ಕಾಂಗ್ರೆಸ್ ಉಪಾಧ್ಯಕ್ಷ ಲೋಕೇಶ್‌ನಾಯ್ಕ್, ಮಾಜಿ ಅಧ್ಯಕ್ಷ ಬಸವರಾಜ್ ಹೊನ್ನೂರು, ಕಾಂಗ್ರೆಸ್ ಮುಖಂಡ ವೀರೇಶ್, ಆಶಾ ಕಾರ್ಯಕರ್ತೆಯರು ಹಾಜರಿದ್ದರು.

**ಶಾಲೆಗೆ ಭೇಟಿ:** ಎಚ್.ಕಲ್ಪನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ದಿಢೀರ್ ಭೇಟಿ ನೀಡಿದ ಶಾಸಕ ಬಸವಂತಪ್ಪ, ಶಿಕ್ಷಕರು ಮತ್ತು ಮಕ್ಕಳ ಹಾಜರಾತಿ ಪರಿಶೀಲಿಸಿದರು. ಈ ವೇಳೆ ಹಾಜರಿ ಪುಸ್ತಕದಲ್ಲಿ ಶಿಕ್ಷಕರು ಬೆಳಗ್ಗೆ ಮತ್ತು ಮಧ್ಯಾಹ್ನ ಸಹಿ ಮಾಡುವ ಬದಲು ಎರಡನ್ನೂ ಬೆಳಿಗ್ಗೆಯೇ ಮಾಡಿರುವುದನ್ನು ಕಂಡು ತರಾಟೆಗೆ ತೆಗೆದುಕೊಂಡರು.

ಮಧ್ಯಾಹ್ನದ ಬಿಸಿಯೂಟಕ್ಕೆ ಬಳಸುವ ಕೊಳೆತ ತರಕಾರಿಯನ್ನು ಕಂಡು ಕೆಂಡಾಮಂಡಲರಾದರು. ಬಿಸಿಯೂಟ ನಿರ್ವಹಿಸುವ ಶಿಕ್ಷಕರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಮೇಲಾಧಿಕಾರಿಗಳಿಗೆ ಸೂಚಿಸುವುದಾಗಿ ಎಚ್ಚರಿಕೆ ನೀಡಿದರು.

# ಹೆಚ್ಚುವರಿ ಬಸ್‌ಗಳನ್ನು ಬಿಡಲು ಭಾರತೀಯ ಮಹಿಳಾ ಒಕ್ಕೂಟದ ಆಗ್ರಹ




ದಾವಣಗೆರೆ, ಡಿ. 20 - ರಾಜ್ಯಾದ್ಯಂತ ಹೆಚ್ಚುವರಿ ಬಸ್‌ಗಳನ್ನು ಬಿಡಲು ಭಾರತೀಯ ಮಹಿಳಾ ಒಕ್ಕೂಟದ ಸಂಘಟನೆ ಸರ್ಕಾರಕ್ಕೆ ಆಗ್ರಹ ಮಾಡಿದೆ.

ಮಹಿಳಾ ಸಂಘಟನೆಯ ರಾಜ್ಯ ಸಮಿತಿ ಕರೆಯ ಮೇರೆಗೆ ಈ ದಿನ ಭಾರತೀಯ ಮಹಿಳಾ ಒಕ್ಕೂಟದ ಕಾರ್ಯಕರ್ತರು ಉಪ ವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ, ರಾಜ್ಯಾದ್ಯಂತ ಹೆಚ್ಚುವರಿ ಬಸ್ ಗಳನ್ನು ಬಿಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಹಸೀಲ್ದಾರ್ ಅವರ ಮೂಲಕ ಮನವಿ ಸಲ್ಲಿಸಿದರು.

ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷ ಎಂ.ಬಿ. ಶಾರದಮ್ಮ, ಕಾರ್ಯದರ್ಶಿ ಎಸ್‌ಎಸ್ ಮಲ್ಲಮ್ಮ, ಖಜಾಂಚಿ ಸರೋಜ ಮುಖಂಡರುಗಳಾದ ಹೆಚ್.ಜಿ. ಮಂಜುಳಾ, ಕುಸುಮ ಎಂ.ಆರ್, ಹೆಚ್ ಇಂದಿರಾ ಗಾಂಧಿ , ತಬ್ರೇಜ್ ,ಬಿ.ಜೆ. ರೇಖಾ ಮತ್ತಿತರರು ಇದ್ದರು.

# ನಗರದಲ್ಲಿ ನಾಳೆ ಚಾಮುಂಡೇಶ್ವರಿ ದೇವಿ ಕಾರ್ತಿಕ



ದಾವಣಗೆರೆ, ಡಿ. 20 - ಶ್ರೀ ಚಾಮುಂಡೇಶ್ವರಿ ದೇವಿ ಕಾರ್ತಿಕೋತ್ಸವ ನಾಡಿದ್ದು ದಿನಾಂಕ 22ರ ಶುಕ್ರವಾರ ಪಿ.ಬಿ. ರಸ್ತೆಯ ನೀಲಮ್ಮನ ತೋಟದಲ್ಲಿರುವ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ನಡೆಯಲಿದೆ. ಅಂದು ಬೆಳಿಗ್ಗೆ 10.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ, ಸಂಜೆ 7 ಗಂಟೆಗೆ ಕಾರ್ತಿಕೋತ್ಸವ ನಡೆಯಲಿದೆ.

# ನಗರದಲ್ಲಿ ಇಂದು ಕಸಾಪ ದತ್ತಿ ಉಪನ್ಯಾಸ

ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮವು ಮಾಜಿ ಪುರಸಭಾ ಪ್ರೌಢಶಾಲೆ ಆವರಣದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ.

ನಾಗರಾಜ್ ಆರ್. ಅಧ್ಯಕ್ಷತೆ ವಹಿಸುವರು. ಇದೇ ಸಂದರ್ಭದಲ್ಲಿ 'ಸ್ವಾಮಿ ವಿವೇಕಾನಂದರ ಆದರ್ಶ ಮೌಲ್ಯಗಳು' ವಿಷಯ ಕುರಿತು ಡಾ. ಎಸ್. ಶಿವಯ್ಯ ಉಪನ್ಯಾಸ ನೀಡುವರು. ಕಾರ್ಯಕ್ರಮದಲ್ಲಿ ಬಿ. ದಿಳ್ಯಪ್ಪ, ಶ್ರೀಮತಿ ಸುಮತಿ ಜಯಪ್ಪ, ನವೀನ್‌ಕುಮಾರ್ ಉಪಸ್ಥಿತರಿರುವರು. ದಾಗಿನಕಟ್ಟೆ ಪರಮೇಶ್ವರಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು.

ಲಿಂ. ಶ್ರೀಮತಿ ಲಿಂಗಮ್ಮ ಜೆ.ಎನ್. ಲಿಂಗಪ್ಪ ದತ್ತಿಯನ್ನು ದಾನಿಗಳಾದ ಪ್ರೊ. ಜಿ.ಎನ್. ಲಿಂಗಪ್ಪ ಮತ್ತು ಮಕ್ಕಳು, 2. ಅಣಬೇರು ಶ್ರೀಮತಿ ರೇವಮ್ಮ ಮಾಳಿಗೇರ ನಿಂಗಪ್ಪ ದತ್ತಿಯನ್ನು ದಾನಿಗಳಾದ ಶ್ರೀಮತಿ ಪ್ರೇಮಲತ ಅಣಬೇರು ರಾಜಣ್ಣ, ವರ್ತಕರು ಹಾಗೂ 3. ಶ್ರೀಮತಿ ಕೆಂಚಮ್ಮ ಸುಂಕದ ವೀರಪ್ಪ ದತ್ತಿಯನ್ನು ದಾನಿಗಳಾದ ಶ್ರೀಮತಿ ಇಂದಿರಾ ಮತ್ತು ಎಸ್.ವಿ. ರಾಮಚಂದ್ರಪ್ಪ ಇವರುಗಳಿಂದ ನಡೆಯುವುದು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಮತ್ತು ಹಿರಿಯ ನಾಗರಿಕರ ಸಹಾಯವಾಣಿ ಇವರುಗಳ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

# ವೀರಶೈವ ಮಹಾಸಭಾ ಅಧಿವೇಶನ : ನಗರದಲ್ಲಿ ಇಂದು ಬೈಕ್ ರ‍್ಯಾಲಿ

ನಾಡಿದ್ದು ದಿನಾಂಕ 23 ಹಾಗೂ 24 ರಂದು ನಡೆಯಲಿರುವ ಅಖಿಲ ಭಾರತ ವೀರಶೈವ ಮಹಾಸಭಾದ ಅಧಿವೇಶನದ ಅಂಗವಾಗಿ ಇಂದು ಬೆಳಿಗ್ಗೆ 10 ಗಂಟೆಗೆ ಯುವ ಘಟಕದ ವತಿಯಿಂದ ಬೈಕ್ ರ‍್ಯಾಲಿ ನಡೆಯಲಿದೆ ಎಂದು ಯುವ ಘಟಕದ ರಾಷ್ಟ್ರೀಯ ಉಪಾಧ್ಯಕ್ಷ ಸಂದೀಪ್ ಅಣಬೇರು ತಿಳಿಸಿದ್ದಾರೆ. ರ‍್ಯಾಲಿಯು ಶಾಮನೂರಿನ ಆಂಜನೇಯ ಸ್ವಾಮಿ ದೇವಾಲಯದಿಂದ ಆರಂಭವಾಗಲಿದೆ.

# ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಷನ್ ಕಾಲೇಜಿಗೆ 10 ರ‍್ಯಾಂಕ್‌ಗಳು



ದಾವಣಗೆರೆ, ಡಿ. 20- ದಾವಣಗೆರೆ ವಿಶ್ವವಿದ್ಯಾನಿಲಯವು ಈಚೆಗೆ ನಡೆಸಿದ ಪ್ರಸಕ್ತ ಸಾಲಿನ ಬಿಸಿಎ ಪದವಿ ಪರೀಕ್ಷೆಯಲ್ಲಿ ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಷನ್ ಕಾಲೇಜಿನ 10 ವಿದ್ಯಾರ್ಥಿಗಳು ರ‍್ಯಾಂಕ್ ಪಡೆದಿದ್ದಾರೆ.

ಜಿ.ಎಂ. ಸುಮತಿ (1ನೇ ರ‍್ಯಾಂಕ್), ದರ್ಶನ್‌ಗೌಡ ರುದ್ರಗೌಡ ಪಾಟೀಲ್ (3ನೇ ರ‍್ಯಾಂಕ್), ಎಂ.ಆರ್. ಅನುಷ, ಎನ್.ಎಸ್. ಪ್ರಿಯಾಂಕ (4ನೇ ರ‍್ಯಾಂಕ್), ಹೆಚ್. ಚಿತ್ರ (5ನೇ ರ‍್ಯಾಂಕ್), ಎಸ್. ಛಾಯಾ (6ನೇ ರ‍್ಯಾಂಕ್), ಜಿ.ಟಿ. ರಾಕೇಶ್, ಎಸ್.ಎಸ್. ಸಹನ (7ನೇ ರ‍್ಯಾಂಕ್), ಎ. ರಾಧಿಕಾ (8ನೇ ರ‍್ಯಾಂಕ್), ಎಸ್. ವೈಷ್ಣವಿ (9ನೇ ರ‍್ಯಾಂಕ್) ಅವರುಗಳು ರ‍್ಯಾಂಕ್ ಪಡೆದ ವಿದ್ಯಾರ್ಥಿಗಳು.

ರ‍್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಯೂ ಆಗಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಬಾಪೂಜಿ ವಿದ್ಯಾಸಂಸ್ಥೆ ಜಂಟಿ ಕಾರ್ಯದರ್ಶಿಯೂ ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಕಾಲೇಜಿನ ಛೇರ್ಮನ್ ಅಥಣಿ ಎಸ್. ವೀರಣ್ಣ ಪ್ರಾಂಶುಪಾಲ ಡಾ. ಬಿ. ವೀರಪ್ಪ ಹಾಗೂ ಉಪನ್ಯಾಸಕ ವೃಂದದವರು ಅಭಿನಂದಿಸಿದ್ದಾರೆ.

# ಕಾಂಗ್ರೆಸ್ ಪಕ್ಷಕ್ಕೆ 2.81 ಕೋಟಿ ದೇಣಿಗೆ

ನವದೆಹಲಿ, ಡಿ. 20 -ಕಾಂಗ್ರೆಸ್ ಪಕ್ಷ ದೇಣಿಗೆ ಸಂಗ್ರಹ ಆರಂಭಿಸಿದ ಮೊದಲ 48 ಗಂಟೆಗಳಲ್ಲಿ 2.81 ಕೋಟಿ ರೂ.ಗಳು ಸಂಗ್ರಹವಾಗಿವೆ. 1.13 ಲಕ್ಷ ಜನರು ಪಕ್ಷಕ್ಕೆ ದೇಣಿಗೆ ನೀಡಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ 'ದೇಶಕ್ಕಾಗಿ ದೇಣಿಗೆ ನೀಡಿ' ಎಂಬ ಹೆಸರಿನ ನಿಧಿ ಸಂಗ್ರಹ ಅಭಿಯಾನ ಆರಂಭಿಸಿದ್ದರು. ಶೇ.80ರಷ್ಟು ಜನರು ಯು.ಪಿ.ಐ. ಮೂಲಕ ಹಣ ನೀಡಿದ್ದಾರೆ. ಮಹಾರಾಷ್ಟ್ರದಿಂದ ಅತಿ ಹೆಚ್ಚಿನ 56 ಲಕ್ಷ ರೂ., ರಾಜಸ್ಥಾನದಿಂದ 26 ಲಕ್ಷ ರೂ., ದೆಹಲಿಯಿಂದ 20 ಲಕ್ಷ ರೂ., ಉತ್ತರ ಪ್ರದೇಶದಿಂದ 19 ಲಕ್ಷ ರೂ. ಹಾಗೂ ಕರ್ನಾಟಕದಿಂದ 18 ಲಕ್ಷ ರೂ. ದೊರೆತಿದೆ. ಬಿಹಾರದಿಂದ ಅತಿ ಹೆಚ್ಚು ಜನ ದೇಣಿಗೆ ನೀಡಿದ್ದಾರೆ. ಆದರೆ, ಅಲ್ಲಿಂದ ಪಾವತಿಸಲಾದ ಮೊತ್ತದ ಪ್ರಮಾಣ ಕಡಿಮೆ ಇದೆ ಎಂದು ಪಕ್ಷದ ನಾಯಕರೊಬ್ಬರು ಹೇಳಿದ್ದಾರೆ.

# ನಾಳೆ ಚೌಡೇಶ್ವರಿ ದೇವಸ್ಥಾನದ ವಾರ್ಷಿಕೋತ್ಸವ

ದಾವಣಗೆರೆ, ಡಿ.20- ಪಿ.ಜೆ. ಬಡಾವಣೆಯ ಸೆಂಟ್ ಪಾಲ್ಸ್ ಕಾನ್ವೆಂಟ್ ಸ್ಕೂಲ್ ಹತ್ತಿರದ ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನದ 18ನೇ ವರ್ಷದ ವಾರ್ಷಿಕೋತ್ಸವ ಮತ್ತು ಕಾರ್ತಿಕೋತ್ಸವ ನಾಡಿದ್ದು ದಿನಾಂಕ 22 ರ ಶುಕ್ರವಾರ ಸಂಜೆ 7 ಗಂಟೆಗೆ ನಡೆಯಲಿದೆ.

# ಪರಿಶಿಷ್ಟರಿಗೆ ರಸ್ತೆಯಲ್ಲಿ ಓಡಾಡದಂತೆ ಬಹಿಷ್ಕಾರ, ಸಮಾನತೆ, ನ್ಯಾಯಕ್ಕೆ ಅಹೋರಾತ್ರಿ ಸತ್ಯಾಗ್ರಹ



ರಾಣೇಬೆನ್ನೂರು, ಡಿ. 20 - ಪರಿಶಿಷ್ಟ ಪಂಗಡಕ್ಕೆ ಸೇರಿದ ವಾಲ್ಮೀಕಿ ಸಮಾಜದವರನ್ನು ಸರ್ಕಾರ ಲಕ್ಷ ಲಕ್ಷ ಖರ್ಚು ಮಾಡಿ ಸರ್ಕಾರ ನಿರ್ಮಿಸಿದ ಸಾರ್ವಜನಿಕ ರಸ್ತೆಯಲ್ಲಿ ಓಡಾಡದಂತೆ ಬಹಿಷ್ಕಾರ ಹಾಕಿ ಮುಳ್ಳು, ಕಲ್ಲುಗಳನ್ನು ಹಾಕಿ, ಇನ್ನೂ ಅಸ್ಪೃಶ್ಯತೆಯ ಅಟ್ಟಹಾಸ ಮೆರೆಯುತ್ತಿರುವುದನ್ನು ಖಂಡಿಸಿ ನ್ಯಾಯಕ್ಕಾಗಿ, ಸಮಾನತೆಗಾಗಿ, ಪರಿಶಿಷ್ಟ ಮಹಿಳೆಯರು, ಮಕ್ಕಳಾದಿಯಾಗಿ ಅಹೋರಾತ್ರಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಘಟನೆ ತಾಲ್ಲೂಕಿನ ಮುದೇನೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮಲಕನಹಳ್ಳಿಯಲ್ಲಿ ಇಂದು ಜರುಗಿದೆ.

ವಾಲ್ಮೀಕಿ ಮತ್ತು ಕುರುಬ ಸಮಾಜ ಎರಡೇ ಎರಡು ಕೋಮಿನ ಜನರು ವಾಸಿಸುವ ಈ ಪುಟ್ಟ ಗ್ರಾಮದಲ್ಲಿ ಈ ಹಿಂದಿನ ಶಾಸಕರ ಅನುದಾನದಲ್ಲಿ ನಿರ್ಮಿಸಿದ ಕಾಂಕ್ರೀಟ್ ರಸ್ತೆಯಲ್ಲಿ ವಾಲ್ಮೀಕಿ ಕೋಮಿಗೆ ಸೇರಿದವರಿಗೆ ಪ್ರವೇಶವಿಲ್ಲ ಎಂದು ನಿರ್ಬಂಧ ವಿಧಿಸಿ ಅಲ್ಲಿ ಕಲ್ಲು ಮುಳ್ಳುಗಳನ್ನು ಹಾಕಿರುವುದೇ ಈ ಘಟನೆಗೆ ಸಾಕ್ಷಿಯಾಗಿದೆ.

ಕಳೆದ ಒಂದೂವರೆ ವರ್ಷದಿಂದ ಈ ಬಗ್ಗೆ ಜಿಲ್ಲಾಡಳಿತ ಮತ್ತು ತಾಲ್ಲೂಕಾಡಳಿತದ ಗಮನಕ್ಕೆ ತಂದು ನ್ಯಾಯ ಒದಗಿಸಬೇಕೆಂದು ಹಲವು ಬಾರಿ ಮನವಿ ಮಾಡಿದರೂ ಮತ್ತು ದಿನನಿತ್ಯ ದೈನಂದಿನ ಕೆಲಸಕ್ಕೆ ಅವಶ್ಯವಿರುವ ರಸ್ತೆಯಲ್ಲಿ ಓಡಾಡದಂತೆ ಬಹಿಷ್ಕಾರ ಹಾಕಿರುವುದನ್ನು ಜಿಲ್ಲಾಧಿಕಾರಿಗಳು, ತಹಶೀಲ್ದಾರರು, ಸಮಾಜ ಕಲ್ಯಾಣಾಧಿಕಾರಿಗಳು, ಪೊಲೀಸ್ ಇಲಾಖೆಯವರ ಗಮನಕ್ಕೆ ತಂದಿದ್ದರೂ ಕೂಡಾ ಸರ್ಕಾರ ನಿರ್ಲಕ್ಷ್ಯ ಮಾಡಿದೆ.

ಕಾರಣ ನಮಗೆ ನ್ಯಾಯ ಸಿಗಬೇಕು, ನಾವು ಕೂಡಾ ಎಲ್ಲರಂತೆ ನೆಮ್ಮದಿಯಿಂದ ಬಾಳಲು ರಕ್ಷಣೆ ನೀಡಬೇಕೆಂದು ಒತ್ತಾಯಿಸಿ ಇಂದು ಬೆಳಗ್ಗೆ 9 ಘಂಟೆಯಿಂದ ಬಹಿಷ್ಕಾರ ಹಾಕಿರುವ ಗ್ರಾಮದ ರಸ್ತೆಯ ಮುಂದೆ ಪರಿಶಿಷ್ಟ ಪಂಗಡಕ್ಕೆ ಸೇರಿದ ಗ್ರಾಮದ ನಿವಾಸಿಗಳು, ಮಹಿಳೆಯರು, ಮಕ್ಕಳಾದಿಯಾಗಿ ಅಹೋರಾತ್ರಿ ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಿದ್ದರೂ ಕೂಡ ಇದುವರೆಗೂ ಜಿಲ್ಲಾಡಳಿತ, ತಾಲ್ಲೂಕಾಡಳಿತ ವು ನ್ಯಾಯ ಕೊಡಿಸಲು ಗ್ರಾಮಕ್ಕೆ ಬಾರದೇ ಇರುವುದು ಸಾಕಷ್ಟು ನೋವು ತಂದಿದೆ ಎಂದು ಧರಣಿ ನಿರತರು, ಅಧಿಕಾರಿಗಳ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಧರಣಿ ಮುಂದುವರಿದಿದೆ. ಧರಣಿ ಸತ್ಯಾಗ್ರಹದಲ್ಲಿ ಕಮಲಮ್ಮ ಪಾಟೀಲ, ನೇತ್ರಾ ಎಸ್. ಪಾಟೀಲ, ಗೀತಾ ಪಾಟೀಲ, ವೀಣಾ ಓಲೇಕಾರ, ರೇಖಮ್ಮ ಎಚ್. ರೇವಣ ಗೌಡ್ರ, ಶ್ರೀಕಾಂತ ಪಾಟೀಲ, ರಾಜು ಓಲೇಕಾರ, ಕೊಟ್ರಪ್ಪ ನಂದಿಗಾವಿ, ಹನುಮಂತಪ್ಪ ಓಲೇಕಾರ, ಎಸ್. ಹನುಮಂತಪ್ಪ ಗೌಡ್ರ ಮುಂತಾದವರು ತಮ್ಮ ಸಣ್ಣ ಸಣ್ಣ ಮಕ್ಕಳೊಂದಿಗೆ ಧರಣಿಯಲ್ಲಿ ಪಾಲ್ಗೊಂಡಿದ್ದಾರೆ. ಹಲಗೇರಿ ಪಿ.ಎಸ್.ಐ. ಬಿರಾದಾರ ಸೂಕ್ತ ಪೊಲೀಸ್ ಬಂದೋಬಸ್ತ್ ಒದಗಿಸಿದ್ದಾರೆ.


# ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ

ನಂ.657/1ಎ, ಮಂಡಿಪೇಟೆ, ದಾವಣಗೆರೆ - 577 001. ದೂರವಾಣಿ : 08192-271537/234330



ಪರಶುರಾಮ್ ಕೆ.
ಅಧ್ಯಕ್ಷರು

ನಮ್ಮ ಬ್ಯಾಂಕಿನ 2023-2028ನೇ ಸಾಲಿನ ಅವಧಿಗೆ ಆಯ್ಕೆಯಾದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿ ಸದಸ್ಯರುಗಳು ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.



ಶ್ರೀಮತಿ ಶ್ವೇತಾ ಕೆ.ಪಿ. (ಶಶಿಧರ್ ಹಾಲೇಕಲ್)
ಉಪಾಧ್ಯಕ್ಷರು



ಕೆ.ಆರ್. ಭರಮಪ್ಪ - ನಿರ್ದೇಶಕರು
ದಿಳ್ಯೆಪ್ಪ .ಬಿ - ನಿರ್ದೇಶಕರು
ಗೋಣೆಪ್ಪ ಹೆಚ್.ಎಂ - ನಿರ್ದೇಶಕರು
ಲಕ್ಕಪ್ಪ ಪಿ. - ನಿರ್ದೇಶಕರು
ಕಾಂತೇಶ್ ಎಸ್.ಹೆಚ್. - ನಿರ್ದೇಶಕರು



ಶ್ರೀಮತಿ ಗೀತಾ ಬಿ. ಮಾಲತೇಶಪ್ಪ - ನಿರ್ದೇಶಕರು
ಗಣೇಶ್ ಹೆಚ್.ಸಿ. - ನಿರ್ದೇಶಕರು
ವೀರಭದ್ರಪ್ಪ (ಜರೇಶ್) - ನಿರ್ದೇಶಕರು
ಪ್ರಕಾಶ್ ಟಿ.ಎನ್. - ನಿರ್ದೇಶಕರು
ಹನುಮಂತ ಜಿ.ಎಸ್. - ನಿರ್ದೇಶಕರು

# ಕನ್ನಡದಲ್ಲಿ ಆಡಳಿತಕ್ಕೆ ಆದ್ಯತೆ : ಜಿಲ್ಲಾಧಿಕಾರಿ



ದಾವಣಗೆರೆ, ಡಿ. 20 – ಕರ್ನಾಟಕದಲ್ಲಿ ಕನ್ನಡ ರಾಜ್ಯ ಭಾಷೆ ಹಾಗೂ ಆಡಳಿತ ಭಾಷೆಯಾಗಿದೆ. ಮಧ್ಯ ಕರ್ನಾಟಕದ ಜಿಲ್ಲೆಯಾಗಿರುವ ದಾವಣಗೆರೆಯಲ್ಲಿ ಕನ್ನಡದಲ್ಲೇ ಆಡಳಿತ ನಡೆಸಲು ಹೆಚ್ಚು ಆದ್ಯತೆ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಭರವಸೆ ನೀಡಿದರು.

ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಪೌರ ಕಾರ್ಮಿಕರು ಹಾಗೂ ಆರೋಗ್ಯ ನಿರೀಕ್ಷಕರಿಗೆ ಇಂದು ಆಯೋಜಿಸಲಾಗಿದ್ದ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂಗ್ಲಿಷ್‌ಗೆ ಸಾವಿರ ವರ್ಷಗಳ ಹಿಂದೆ ಲಿಪಿಯೇ ಇರಲಿಲ್ಲ. ಆದರೆ, ಸಾವಿರ ವರ್ಷಗಳ ಹಿಂದೆ ಕನ್ನಡದಲ್ಲಿ ಲಿಪಿಯಷ್ಟೇ ಅಲ್ಲದೇ ಗ್ರಂಥಗಳನ್ನು ರಚಿಸಲಾಗಿತ್ತು. ಕನ್ನಡ ಸಾಹಿತ್ಯದಲ್ಲಿ ಅಗಾಧ ನೈಪುಣ್ಯತೆ ಇತ್ತು. ಕನ್ನಡ ವಿಶ್ವದ ಭಾಷೆಗಳಲ್ಲಿ ರಾಣಿ ಭಾಷೆಯಂತಿದೆ ಎಂದು ತಿಳಿಸಿದರು.

2,400 ವರ್ಷಗಳ ಹಿಂದೆಯೂ ಕನ್ನಡ ಬಳಕೆಯಲ್ಲಿದ್ದ ಹಲವಾರು ಉದಾಹರಣೆಗಳಿವೆ. ಅಶೋಕ ಚಕ್ರವರ್ತಿಯ ಪಾಳಿ ಭಾಷೆಯ ಶಿಲಾಶಾಸನದಲ್ಲೂ ಕನ್ನಡದ ಪದ ಇರುವುದು ಕಂಡು ಬಂದಿದೆ ಎಂದವರು ಹೇಳಿದರು.

ಹಳೆಗನ್ನಡದ ಚಂಪೂ, ಷಟ್ಪದಿ, ಸಾಂಗತ್ಯ, ವಚನಗಳಿಂದ ಹಿಡಿದು ಈಗಿನ ನವ್ಯ, ನವೋದಯ ಹಾಗೂ ದಲಿತದವರೆಗೆ ಸಾಕಷ್ಟು ಸಾಹಿತ್ಯ ಪ್ರಾಕಾರಗಳು ಕನ್ನಡದಲ್ಲಿವೆ. ಈ ಭಾಷಾ ಸೊಗಡನ್ನು ಯುವಕರು ಅರಿಯಬೇಕು ಎಂದು ಜಿಲ್ಲಾಧಿಕಾರಿ ಹೇಳಿದರು.

ತಾಯಿಗೆ ವಿಶೇಷ ಗೌರವ ಹಾಗೂ ಮಹತ್ವ ಇದೆ. ಅದೇ ರೀತಿಯಲ್ಲೇ ಮಾತೃಭಾಷೆ ಹಾಗೂ ನಾಡ ಭಾಷೆಯಾದ ಕನ್ನಡಕ್ಕೂ ಮಹತ್ವ ಇದೆ. ಈ ಭಾಷೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ಎಲ್ಲರೂ ಮಾಡಬೇಕಿದೆ ಎಂದರು.

ಈ ಸಂದರ್ಭದಲ್ಲಿ ಕನ್ನಡ ಫಲಕಗಳಿಗೆ ಸಂಬಂಧಿಸಿದ ನಿಯಮ ಜಾರಿಗೆ ಶ್ರಮಿಸಿದ ನಗರ ಪಾಲಿಕೆಯ ಪೌರ ಕಾರ್ಮಿಕರು ಹಾಗೂ ಆರೋಗ್ಯ ನಿರೀಕ್ಷಕರನ್ನು ಸನ್ಮಾನಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಅಧ್ಯಕ್ಷ ಎಂ.ಎಸ್. ರಾಮೇಗೌಡ, ನಗರದಲ್ಲಿ ಈಗಾಗಲೇ ಶೇ.70ರಷ್ಟು ಫಲಕಗಳು ಕನ್ನಡದಲ್ಲಿವೆ. ಉಳಿದ ಫಲಕಗಳ ವಿರುದ್ಧವೂ ಪಾಲಿಕೆ ವತಿಯಿಂದ ಕ್ರಮ ತೆಗೆದುಕೊಳ್ಳಬೇಕು. ಜಿಲ್ಲಾದ್ಯಂತ ಕ್ರಮ ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳು ಸೂಚನೆ ನೀಡಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದ ವೇದಿಕೆ ಮೇಲೆ ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಪಾಲಿಕೆ ಉಪ ಮೇಯರ್ ಯಶೋಧ ಹೆಗ್ಗಪ್ಪ, ಪಾಲಿಕೆ ವಿಪಕ್ಷ ನಾಯಕ ಕೆ. ಪ್ರಸನ್ನ ಕುಮಾರ್, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ ಜಗದೀಶ್, ಪಾಲಿಕೆ ಆಯುಕ್ತೆ ರೇಣುಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಕ.ರ.ವೇ. ಮಹಿಳಾ ಘಟಕದ ಅಧ್ಯಕ್ಷೆ ಬಸಮ್ಮ, ಕ.ರ.ವೇ. ಗೌರವಾಧ್ಯಕ್ಷ ವಾಸುದೇವ ರಾಯ್ಕರ್, ಕ.ಸಾ.ಪ. ಜಿಲ್ಲಾ ಅಧ್ಯಕ್ಷ ಬಿ. ವಾಮದೇವಪ್ಪ ಮತ್ತಿತರರು ಉಪಸ್ಥಿತರಿದ್ದರು.

ಶ್ರೀನಿವಾಸ ಸ್ವಾಗತಿಸಿದರೆ, ಶ್ರೀಕಾಂತ್ ಭಟ್ ನಿರೂಪಿಸಿದರು.

## ನಗರದಲ್ಲಿ ಇಂದು ಆರೋಗ್ಯ ಕಾರ್ಯಾಗಾರ

ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ಆಶ್ರಯದಲ್ಲಿ ವಿವೇಕ್ ಪೋಷಕರ ಆರೋಗ್ಯ ಕಾರ್ಯಾಗಾರದ ಅಡಿಯಲ್ಲಿ ಡಿಸೆಂಬರ್ 1 'ವಿಶ್ವ ಏಡ್ಸ್ ದಿನ' ವಿಷಯ ಕುರಿತು ಉಪನ್ಯಾಸ ಕಾರ್ಯ ಕ್ರಮವು ಇಂದು ಮಧ್ಯಾಹ್ನ 3.30 ರಿಂದ 4.30 ರವರೆಗೆ ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ಸಭಾಂಗಣದಲ್ಲಿ ನಡೆಯ ಲಿದೆ. ಚರ್ಮರೋಗ ವಿಭಾಗದ ಮುಖ್ಯಸ್ಥ ಡಾ. ಸೂಗಾರೆಡ್ಡಿ ಅವರು ಪೋಷಕರನ್ನು ಉದ್ದೇಶಿಸಿ ಮಾತನಾಡು ವರು ಎಂದು ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ. ಜಿ. ಗುರುಪ್ರಸಾದ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೆಚ್.ಕೆ.ಆರ್ ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹೊಸ ಬಡಾವಣೆ, ಮೌನೇಶ್ವರ ಬಡಾವಣೆ ಹಾಗೂ ಇ.ಎಸ್.ಐ .ಆಸ್ಪತ್ರೆ, ಕೆ.ಟಿ.ಜೆ ನಗರ ಪೊಲೀಸ್ ಠಾಣೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.




# 35 ಶಾಸಕರಿಗೆ ನಿಗಮ-ಮಂಡಳಿ ಸ್ಥಾನ

ಬೆಂಗಳೂರು, ಡಿ. 20 - ಆಡಳಿತಾರೂಢ ಕಾಂಗ್ರೆಸ್‌ನ 35 ಶಾಸಕರಿಗೆ ನಿಗಮ-ಮಂಡಳಿಗಳ ಅಧ್ಯಕ್ಷ ಸ್ಥಾನ ದಕ್ಕಿದೆ. ನಿಗಮ-ಮಂಡಳಿಗಳಲ್ಲದೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಗಳ ರಾಜಕೀಯ ಕಾರ್ಯದರ್ಶಿಗಳಾಗಿ ತಲಾ ಇಬ್ಬರು ಹಿರಿಯ ಶಾಸಕರನ್ನು ಕಾಂಗ್ರೆಸ್ ವರಿಷ್ಠರು ನೇಮಕ ಮಾಡಿದ್ದಾರೆ.

ಮುಂಬರುವ ಲೋಕಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ, ಪಕ್ಷದ ಪದಾಧಿಕಾರಿಗಳ ಪುನರ್ ರಚನೆ ಹಾಗೂ ನಿಗಮ-ಮಂಡಳಿಗಳಿಗೆ ಅಧ್ಯಕ್ಷರ ನೇಮಕ ಸಂಬಂಧ ಕಳೆದ ಮೂರು ದಿನಗಳಿಂದ ಕಾಂಗ್ರೆಸ್ ವರಿಷ್ಠರೊಟ್ಟಿಗೆ ಸರಣಿ ಸಭೆಗಳನ್ನು ನಡೆಸಿದ ನಂತರ ನಿಗಮ-ಮಂಡಳಿ ಅಧ್ಯಕ್ಷರ ಪಟ್ಟಿ ಅಂತಿಮಗೊಂಡಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲಾ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ 35 ನಿಗಮಗಳಿಗೆ ಅಧ್ಯಕ್ಷರನ್ನು ನೇಮಕ ಮಾಡುವ ತೀರ್ಮಾನ ಕೈಗೊಳ್ಳಲಾಯಿತು.

ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದವರಿಗೆ, ಕಾರ್ಯಕರ್ತರಿಗೆ, ವಿಧಾನ ಪರಿಷತ್ ಸದಸ್ಯರಿಗೆ ಮೊದಲ ಪಟ್ಟಿಯಲ್ಲಿ ಅವಕಾಶ ದೊರೆತಿಲ್ಲ.

ಸಿದ್ಧಗೊಂಡ ಪಟ್ಟಿಗೆ ಅಂಕಿತ ಹಾಕಿಸಿಕೊಳ್ಳಲು ಎಐಸಿಸಿ ಅಧ್ಯಕ್ಷರಿಗೆ ಪಟ್ಟಿ ರವಾನಿಸಿದ್ದು, ಯಾವುದೇ ಸಮಯದಲ್ಲಿ ಪ್ರಕಟಗೊಳ್ಳಲಿದೆ.

ವರಿಷ್ಠರು ಹಸಿರು ನಿಶಾನೆ ನೀಡಿದ ನಂತರ ಸಂಬಂಧಪಟ್ಟ ಇಲಾಖೆಗಳ ಮೂಲಕ ಅಧ್ಯಕ್ಷರ ನೇಮಕಾತಿಯ ಸರ್ಕಾರಿ ಆದೇಶ ಹೊರಬೀಳಲಿದೆ.

## ಟೆಲಿಕಾಂ ಮಸೂದೆಗೆ ಲೋಕಸಭೆ ಒಪ್ಪಿಗೆ

ನವದೆಹಲಿ, ಡಿ. 20 – ಕೇಂದ್ರ ಸರ್ಕಾರ ಟೆಲಿಕಾಂ ವಲಯದಲ್ಲಿ ಹೊಸ ಬದಲಾವಣೆ ತರುವ ಮಸೂದೆಗೆ ಲೋಕಸಭೆ ಅಂಗೀಕಾರ ನೀಡಿದೆ. ಹರಾಜು ಹೊರತಾದ ಮಾರ್ಗದಲ್ಲಿ ಸ್ಪೆಕ್ಟ್ರಮ್ ವಿತರಿಸಲು ಅವಕಾಶ ಕೊಡುವ ಅಂಶ ಈ ಮಸೂದೆಯಲ್ಲಿದೆ. ಅಮಾನತ್ತಿನ ಕಾರಣದಿಂದ ಬಹುತೇಕ ಸಂಸದರು ಸದನದಲ್ಲಿ ಉಪಸ್ಥಿತರಿರಲಿಲ್ಲ. ಧ್ವನಿಮತದ ಮೂಲಕ ಮಸೂದೆಗೆ ಒಪ್ಪಿಗೆ ಪಡೆಯಲಾಗಿದೆ.

ಟೆಲಿಕಾಂ ವಲಯದಲ್ಲಿ ವ್ಯವಸ್ಥಿತ ಸುಧಾರಣೆ ತರಲು ಈ ಮಸೂದೆ ಉದ್ದೇಶಿಸಿದೆ ಎಂದು ಕೇಂದ್ರ ಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.




## ಶ್ರೀ ಚೌಡಾಂಬಿಕಾ ದೇವಿಗೆ ಕಾರ್ತಿಕೋತ್ಸವದ ವಿಶೇಷ ಅಲಂಕಾರ



ದಾವಣಗೆರೆ, ಡಿ.20- ನಗರದ ಹಳೇ ಭಾಗದಲ್ಲಿರುವ ಶ್ರೀ ಚೌಡಾಂಬಿಕಾ ದೇವಸ್ಥಾನದಲ್ಲಿ 66ನೇ ಕಾರ್ತಿಕೋತ್ಸವದ ಅಂಗವಾಗಿ ಶ್ರೀದೇವಿ ಮೂರ್ತಿಗೆ ಅತ್ಯಾಕರ್ಷಕವಾದ ವಜ್ರ ಖಚಿತ ಸುವರ್ಣ ರಜತ ಕವಚಗಳ ಅಲಂಕಾರ ಮಾಡಲಾಗಿತ್ತು.

ಪಾರಂಪರಿಕ ಶ್ರದ್ಧಾ-ಭಕ್ತಿಗಳಿಂದ ನೆರವೇರಿದ ಮಹೋತ್ಸವದಲ್ಲಿ ದೇವಸ್ಥಾನದ ವ್ಯವಸ್ಥಾಪಕರು ಹಾಗೂ ಸೇವಾಕರ್ತರಾದ ಶಾಮನೂರು ಲಕ್ಷ್ಮಿನಾರಾಯಣ ಶೆಟ್ಟರ್ ಮಕ್ಕಳು ಮತ್ತು ಕುಟುಂಬದವರು ಶಾಮನೂರು ಶ್ರೀನಿವಾಸ್ ಶೆಟ್ಟರ್ ಮನೆತನದವರು ಹಾಗೂ ಭಕ್ತ ಮಂಡಳಿಯವರು ಹಾಗೂ ಭಕ್ತರು ಪಾಲ್ಗೊಂಡಿದ್ದರು.

## ಪ್ರಬಂಧ ಸ್ಪರ್ಧೆ: ಎಸ್.ಬಿ.ಸಿ ಕಾಲೇಜಿನ ಆರ್. ಮೇಘ ಪ್ರಥಮ



ದಾವಣಗೆರೆ, ಡಿ.20- ಜಿಲ್ಲಾ ಮತದಾರರ ಸಾಕ್ಷರತಾ ವೇದಿಕೆ ಆಯೋಜಿಸಿದ್ದ ಪ್ರಬಂಧ (ಇಂಗ್ಲಿಷ್ ಮಾಧ್ಯಮ) ಸ್ಪರ್ಧೆಯಲ್ಲಿ ನಗರದ ಎಸ್.ಬಿ.ಸಿ. ಕಾಲೇಜಿನ ಬಿಸಿಎ ವಿದ್ಯಾರ್ಥಿನಿ ಆರ್. ಮೇಘ ಪ್ರಥಮ ಸ್ಥಾನ ಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಮೇಘಾ ಅವರನ್ನು ಕಾಲೇಜಿನ ಅಧ್ಯಕ್ಷ ಬಿ.ಸಿ ಉಮಾಪತಿ, ಪ್ರಾಂಶುಪಾಲ ಡಾ.ಕೆ.ಷಣ್ಮುಖ ಅಭಿನಂದಿಸಿದ್ದಾರೆ.

## ಎ.ಜಿ.ಬಿ. ಕಾಲೇಜಿಗೆ ರ‍್ಯಾಂಕ್



ದಾವಣಗೆರೆ, ಡಿ.20- ಕಳೆದ 2022-23 ರಲ್ಲಿ ನಡೆದ ಸ್ನಾತಕ ಪದವಿ ಪರೀಕ್ಷೆಯಲ್ಲಿ ನಗರದ ಎ.ಜಿ.ಬಿ. ಪ್ರಥಮ ದರ್ಜೆ ಮಹಾವಿದ್ಯಾಲಯದ ವಿದ್ಯಾರ್ಥಿನಿ ಕು. ಬಿಂದು ಪಿ.ಆರ್ ಅವರು ಬಿ.ಕಾಂ ಪದವಿಯಲ್ಲಿ ಶೇ. 9.25 (ಸಿ.ಜಿ.ಪಿ.ಎ) 10ನೇ ರ‍್ಯಾಂಕ್ ಪಡೆದಿದ್ದಾರೆ.

## ವಿಶ್ವ ಮಾನವ ಹಕ್ಕುಗಳ ದಿನಾಚರಣೆ ನಗರಕ್ಕಿಂದು ಡಾ. ಲೋಹಿತ್ ನಾಯ್ಕರ



ಆರ್.ಎಲ್. ಲಾ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಏರ್ಪಾಡಾಗಿರುವ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮವನ್ನು ಮಾನವ ಹಕ್ಕುಗಳ ಪ್ರತಿಪಾದಕರು ಹಾಗೂ ಚಿಂತಕರೂ, ಸಾಹಿತಿಗಳೂ, ವಕೀಲರೂ ಆದ ಡಾ. ಲೋಹಿತ್ ನಾಯ್ಕರ ಅವರು ಉದ್ಘಾಟಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರು ಹಾಗೂ ಮಾನವ ಹಕ್ಕುಗಳ ವೇದಿಕೆಯ ಕಾರ್ಯದರ್ಶಿ ಎಲ್.ಹೆಚ್. ಅರುಣ್‌ಕುಮಾರ್ ಭಾಗವಹಿಸಲಿದ್ದು, ಸಮಾರಂಭದ ಅಧ್ಯಕ್ಷತೆಯನ್ನು ಆರ್.ಎಲ್. ಲಾ ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಎಸ್. ಯತೀಶ್ ವಹಿಸಲಿದ್ದಾರೆಂದು ಐಕ್ಯೂಎಸಿ ಕೋ-ಆರ್ಡಿನೇಟರ್ ಬಿ.ಪಿ. ಬಸವನಗೌಡ, ಕಾರ್ಯಕ್ರಮ ಸಂಯೋಜಕ ಪ್ರದೀಪ್ ಕೆ.ಎನ್. ತಿಳಿಸಿದ್ದಾರೆ.

## ನ್ಯಾಯಾಂಗ ಇಲಾಖೆ ಭೂಲಕ್ಷ್ಮಿಗೆ ಸನ್ಮಾನ



ದಾವಣಗೆರೆ, ಡಿ.20- ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಕಳೆದ ವಾರ ಹಮ್ಮಿಕೊಳ್ಳಲಾಗಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎಂ. ಹೆಗಡೆ ಅವರು, ರಾಜ್ಯ ಸರ್ಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಕುಸ್ತಿ ಮತ್ತು ಭಾರ ಎತ್ತುವ ಸ್ಪರ್ಧೆಗಳಲ್ಲಿ ವಿಜೇತರಾಗಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುವ ನ್ಯಾಯಾಂಗ ಇಲಾಖೆಯಲ್ಲಿ ಆದೇಶ ಜಾರಿಕಾರರಾದ ಶ್ರೀಮತಿ ಭೂಲಕ್ಷ್ಮಿ ಅವರನ್ನು ಸನ್ಮಾನಿಸಿ, ಗೌರವಿಸಿದರು.

